NON-OFFICIAL RESOLUTION

Re : **Replacement of the present Singal Party Government by a Papular Non-Party Government.**

Mr. SPEAKER.—I suppose the position in regard to the Members who have participated in the Debate on the resolution moved by Sri Veerabhadrappa Erappa, is 4. Sri K. S. Suryanarayana Rao is to conclude his speech.

Time allotted is 3 hours for this and the time consumed is 45 minutes. Time left over is 2 hours 15 minutes. Sri K. S. Suryanarayana Rao may speak.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಸ್ವಾಮಿ, ಹೋದ ವಾರ ಈ ಚರ್ಚೆ ಮೇಲೆ ಒಂದೆರಡು ಮಾತುಗಳನ್ನು ಮಾತ್ರ ಆಡಿದ್ದೇನೆ. ಇನ್ನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಇದಕ್ಕೆ ಮೊದಲು ಮಾತನಾಡಿದ ವಿರೋಧ ಪಕ್ಷದ ಸ್ನೇಹಿತರು ಈ ತುರ್ತು ಪರಿಸ್ಥಿತಿಯನ್ನು ಗಮನಿಸಿಟ್ಟು ಈ ಏಕಪಕ್ಷೀಯ ಸರಕಾರ ಬದಲಾವಣೆಯಾಗಬೇಕು ಎಂದು ಭಾಷಣ ಮಾಡಿದರು. ಸಮ್ಮಿಶ್ರ ಸರಕಾರ ಆಗಬೇಕು ಎಂದು ಮಾತನಾಡಿದರು. ಅವರು ಮಾತನಾಡುವಾಗ ಹೇಳಿದ್ದೆಲ್ಲಾ ನೋಡಿದರೆ, ಬಹುಶ: ನಿಘಂಟುವಿನಲ್ಲಿ ಇದ್ದಂಥ ಎಲ್ಲಾ ಶಬ್ದಗಳನ್ನೂ ಉಪಯೋಗಿಸಿ, ಈ ಸರಕಾರ ಬದಲಾವಣೆಯಾಗಬೇಕು, ಬೇರೆ ಸರಕಾರವಾಗಬೇಕು ಎಂದು ಹೇಳಿದರು. ನಿಘಂಟುವಿನಲ್ಲಿ ಇರತಕ್ಕಂಥ ಎಲ್ಲ ಶಬ್ದಗಳನ್ನೂ ಉಪಯೋಗಿಸಿದ ಮೇಲೆ, ಅಂಥ ಸರಕಾರದೊಡನೆ ಸೇರಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದೆ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸುಧಾರಣೆ ಮಾಡುವುದಕ್ಕೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಇಲ್ಲ, ಹಾಗೆ ಆಗುವುದಿಲ್ಲ. ಅವರ ಭಾವನೆಯೊಳಗೆ ಒಂದು ಸುಭದ್ರವಾದ ಸರಕಾರ ಇರಬೇಕು ಎನ್ನುವ ಅಭಿಪ್ರಾಯವಿದ್ದರೆ, ಅದಕ್ಕೆ ನಾನಾ ಕಾರಣಗಳನ್ನು ಸೂಚಿಸುವುದಕ್ಕೆ ಅವಕಾಶವಿದೆ. ತುರ್ತು ಪರಿಸ್ಥಿತಿಯೊಳಗೆ ಸರಕಾರ ಹೇಗಿರಬೇಕೆಂದರೆ ಚರಿತ್ರೆಯ ಪುಟಗಳನ್ನು ಹಿಂತಿರುಗಿಸಿ ನೋಡಿದರೆ ಗೊತ್ತಾಗುತ್ತದೆ. 1947ರಲ್ಲಿ ಕೇಂದ್ರದಲ್ಲಿ ಒಂದು ಸಮ್ಮಿಶ್ರ ಸರಕಾರದ ಅನುಭವವನ್ನು ನಾವು ಪಡೆಯಬಹುದು. ಚರಿತ್ರೆಯ ಅನುಭವವನ್ನು ನೋಡುವುದಾದರೆ, ಯಾವ ಪರಿಸ್ಥಿತಿಯಲ್ಲಿಯೂ ಅಂಥ ಸಮ್ಮಿಶ್ರ ಸರಕಾರ ಸರಿ ಹೋಗುವುದಿಲ್ಲ. ಅಂಥ ಪರಿಸ್ಥಿತಿಯೊಳಗೆ ಯಾವ ಸರಕಾರವಿರಬೇಕೆಂದರೆ ಧೃಢವಾದ ಸರಕಾರವಿರಬೇಕು. ಚೆನ್ನಾಗಿ ಕೆಲಸವನ್ನು, ಕಾರ್ಯಕ್ರಮವನ್ನು ಕೈಗೊಳ್ಳುವಂಥ ಸರಕಾರ ಇರಬೇಕು. ಅದಷ್ಟು ಕಡಮೆ ಸಂಖೆಯಲ್ಲ ಕಡಿಮೆ ಸಮಯದಲ್ಲ ಪರಿಸ್ಥಿತಿಯನ್ನು ಎದುರಿಸಲು ಶಕ್ತಿಯುಳ್ಳ ಸರಕಾರವಿರಬೇಕು. ಅದನ್ನು ಬಿಟ್ಟು ಬೇರೆ ವಿಧದಲ್ಲಿ ಈ ಒಂದು ಸಮ್ಮಿಶ್ರ ಸರಕಾರವನ್ನು ಮಾಡಿ ಎಂದು ಹೇಳುವುದರಲ್ಲ ಅರ್ಥವಿಲ್ಲ. ಯಾವಾಗ ಮಾಡುವುದು ಸಮ್ಮಿಶ್ರ ಸರಕಾರ! ಯಾವಾಗ ಅಧಭ್ರತೆ ಸರಕಾರದಲ್ಲಿ ಇರುತ್ತದೆಯೋ, ಯಾವಾಗ ಸರಕಾರಕ್ಕೆ ಸುವ್ಯವಸ್ಥಿತವಾಗಿ ನಡೆಯುವುದಕ್ಕೆ ಶಕ್ತಿ ಇಲ್ಲದೆ ಹೋಗುತ್ತದೆಯೋ ಅಂಥ ಸಂದರ್ಭಗಳಲ್ಲ ಸುಭದ್ರವಾದ ಸರಕಾರ ರಚಿಸುವ ಕಾರಣದಿಂದ ಸಮ್ಮಿಶ್ರ ಸರಕಾರ ಆಗಬೇಕು. ಇವೊತ್ತಿನ ಪರಿಸ್ಥಿತಿ ಏನಾಗಿದೆ? ಸರಕಾರದ ನಡೆವಳಿಕೆ ಗಮನಿಸಿ, ಪಕ್ಷಾಪಕ್ಷಗಳ ಬಲಾಬಲ ವಿಮರ್ಶೆ ಮಾಡಬೇಕು.

[MR. DEPUTY SPEAKER in the Chair.]

ಸ್ವಾಮಿ, ಯಾವ ಪಕ್ಷ ಒಂದು ಸರ್ಕಾರಕ್ಕೆ ವಿರೋಧ ಪಕ್ಷ ಎಂದು ಸಭೆಯಲ್ಲ ಒಪ್ಪಿಕೊಂಡಿದ್ದೇವೆ, ಆ ಪಕ್ಷ ಎಲ್ಲಿಯವರೆಗೆ ಸುವ್ಯವಸ್ಥಿತವಾಗಿರುತ್ತದೆ, ಬಲಯುತವಾಗಿರುತ್ತದೆ, ಸಂಖ್ಯಾ ಬಲದಲ್ಲಿ ಹಿಡಿತದ ರೀತಿಯಲ್ಲಿರುತ್ತದೆ. ಅಲ್ಲಿಯವರೆಗೆ ಪ್ರಜಾಪ್ರಭುತ್ವ ಬೆಳೆಯಲಿಕ್ಕೆ ಅವಕಾಶವಾಗುತ್ತದೆ. ಸರ್ಕಾರಗಳೂ ಚೆನ್ನಾಗಿ ನಡೆಯಲು ಸಹಾಯಕವಾಗುತ್ತದೆ. ಅದನ್ನು ಬಿಟ್ಟು ಎಲ್ಲ ವಿರೋಧಪಕ್ಷಗಳು ಹಿಂದು ಹಿಂಚಿ ಹೋಗಿರುತ್ತವೆ, ಯಾರಿಗೆ ಯಾರ ಮಾತಿನಲ್ಲಿಯೂ ಬೆಲೆ ಇಲ್ಲದೆ ಹೋಗುತ್ತದೆ, ಎಲ್ಲರೂ ರೈಲ್ವೆ ಪ್ರಯಾಣಿಕರ ಸ್ನೇಹಿತರಂತೆ ಸೇರಿರುತ್ತಾರೆ, ಅಂಥ ಸಂದರ್ಭಗಳಲ್ಲಿ ಏಕಪಕ್ಷೀಯ ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತದೆ

(ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್)

ಎನ್ನುವುದು ನಾವು ಸ್ವಲ್ಪ ಗಮನಿಸಬೇಕಾದ ವಿಚಾರ. ಆದುದರಿಂದ ಪ್ರಜಾಪ್ರಭುತ್ವ ಸುವ್ಯವಸ್ಥಿತವಾಗಬೇಕಾದರೆ ವಿರೋಧಪಕ್ಷ ಸುಭದ್ರವಾಗಿರಬೇಕು. ಅಂಥ ಸುಭದ್ರವಾದ ವಿರೋಧಪಕ್ಷ ಸಾಕಷ್ಟು ಪ್ರಬಲಯುತವಾಗಿದ್ದರೆ ಮಾತ್ರ ಈ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಲು ಆಗುತ್ತದೆ. ಇವೊತ್ತಿನ ಪರಿಸ್ಥಿತಿ ಹೇಗೆ ಇದೆ ಎಂದರೆ ನಾನಾಗಲೇ ಹೇಳಿದ ಹಾಗೆ ವಿರೋಧಪಕ್ಷದಲ್ಲಿರತಕ್ಕ ಅನೇಕ ಗುಂಪುಗಳನ್ನೂ ಮತ್ತು ಪಕ್ಷಗಳನ್ನು ನೋಡಿದರೆ ಸುವ್ಯವಸ್ಥಿತವಾದ, ಪ್ರಜಾಪ್ರಭುತ್ವಕ್ಕೆ ಯೋಗ್ಯವಾದ ವಿರೋಧಪಕ್ಷ ನಮ್ಮಲ್ಲಿ ರೂಪುಗೊಂಡಿಲ್ಲವೆಂದರೆ ವಿರೋಧಪಕ್ಷದ ಜನರು ನನ್ನನ್ನು ತಪ್ಪು ತಿಳಿಯಬಾರದೆಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ವೈಯಕ್ತಿಕವಾಗಿ ಯಾರನ್ನೂ ಟೀಕೆ ಮಾಡುತ್ತಿಲ್ಲ. ಇಂಥ ದುರ್ಬಲವಾದ ವಿರೋಧಪಕ್ಷವಿದ್ದರೆ ಏಕಪಕ್ಷ ಸರ್ಕಾರಗಳು ಅನೇಕ ಸಂದರ್ಭಗಳಲ್ಲಿ ತಮ್ಮ ಪ್ರಭಾವವೋ, ಸಂಖ್ಯೆಯ ಪ್ರಭಾವವೋ, ಅಥವಾ ವಿರೋಧಪಕ್ಷದ ದುರ್ಬಲತೆಯ ಪ್ರಭಾವವೋ ಅಥವಾ ಗುಂಪಿನ ಪ್ರಭಾವವೋ, ಅಥವಾ ಶಕ್ತಿಯ ಪ್ರಭಾವವೋ, ಯಾವುದೋ ಪ್ರಭಾವಕ್ಕೆ ಒಳಗಾಗಿ ಅಡಳಿತವನ್ನು ತನಗೆ ಇಚ್ಛೆ ಬಂದಂತೆ ನಡೆಸಲು ಅವಕಾಶವಾಗುತ್ತದೆ. ಆವಾಗ ಸರ್ಕಾರಕ್ಕೆ ತಾವು ಮಾಡಿದ್ದು ಸರಿಯೇ ಎನ್ನುವ ಮಾತನ್ನು ವಿರೋಧಪಕ್ಷದವರು ಹೇಳಿದರೆ. ಅವರು ಹೇಳುವುದು ಸರಿಯಲ್ಲ ಎನ್ನುವ ಭಾವನೆ ಬೆಳೆಯುತ್ತದೆ. ನಾನು ಮಾಡಿದ್ದು ಸರಿ, ಅದನ್ನು ನನ್ನ ಜನ ಒಪ್ಪುತ್ತಾರೆ, ನಮ್ಮಲ್ಲಿ ಸಂಖ್ಯಾ ಬಲವಿದೆ, ನಾವು ಮಾಡಿದ್ದೇ ಸರಿ ಎಂದು ಹೇಳತಕ್ಕ ಪರಿಸ್ಥಿತಿ ಉದ್ಭವವಾಗುತ್ತದೆ. ಇಂಥ ಪರಿಸ್ಥಿತಿ ಉದ್ಭವವಾಗದೇ ಇರಬೇಕಾದರೆ ನಾನಾಗಲೇ ತಿಳಿಸಿದಂತೆ ವಿರೋಧಪಕ್ಷಗಳು ಬಲಯುತವಾಗಬೇಕು ಮತ್ತು ಸುವ್ಯವಸ್ಥಿತವಾಗಬೇಕು, ಒಂದು ತತ್ವಕ್ಕೆ ಕಟ್ಟುಬಿದ್ದು ಕೆಲಸಮಾಡುವಂಥವರಾಗಬೇಕು. ಹಾಗಿಲ್ಲದೆ ಹೋದರೆ ಎಲ್ಲ ಬಹು ಸಂಖ್ಯಾತರ ಬಲದಿಂದ ರಾಜ್ಯಪಾಳುತ್ತಾರೆ, ಆ ಬಹು ಸಂಖ್ಯಾತರ ಅಧಿಕಾರಕ್ಕೆ ಅಲ್ಪ ಸಂಖ್ಯಾತರು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಅದು ಒಳ್ಳೆಯದಾಗಬಹುದು, ಅನೇಕ ಸಂದರ್ಭಗಳಲ್ಲಿ ನಣ್ಣಪುಟ್ಟ ಮೈನಾರಿಟಿಗಳಿಗೆ ತೊಂದರೆಯಾಗಬಹುದು. ಯಾರಿಗೆ ಸಂಖ್ಯಾ ಬಲವಿದೆ, ಗುಂಪಿನ ಬಲವಿದೆ, ಅವರು ತಮ್ಮ ಜನರನ್ನು ತಮ್ಮ ಗುಂಪಿನ ಜನರನ್ನು ಬೆಳೆಸಲಕ್ಕೆ ಪ್ರಯತ್ನಪಡುವುದು ಸ್ವಾಭಾವಿಕ. ಅಂಥ ಸಂದರ್ಭಗಳಲ್ಲಿ ನಣ್ಣಪುಟ್ಟ ಮೈನಾರಿಟಿಗಳಿಗೆ, ಅವರು ಹೇಳಿದುದನ್ನು ಕೇಳುತ್ತಿರುವುದಕ್ಕೆ, ಅವರಿಗೆ ಆಗಬೇಕಾದ್ದು ಆಗುವುದಕ್ಕೆ ಅವಕಾಶವಿರುವುದಿಲ್ಲ. ಅವರ ಮಾತಿನಲ್ಲಿ ಬೆಲೆ ಬರುವುದಿಲ್ಲ. ಏಕೆಂದರೆ ಅವರಿಗೆ ಬೆಂಬಲ ಕಡಮೆ ಇರುತ್ತದೆ. ಬಹುಮಂದಿ ಇರತಕ್ಕ ಸದಸ್ಯರ ಪಕ್ಷ ಅಲ್ಪ ಸಂಖ್ಯಾತರ ರಕ್ಷಣೆಯನ್ನು ನೋಡಿಕೊಳ್ಳಬೇಕಾದುದು ಅವರ ಕರ್ತವ್ಯ ಮತ್ತು ಜವಾಬ್ದಾರಿ. ವಿರೋಧಪಕ್ಷ ದುರ್ಬಲವಾಗಿದೆ ಎಂದ ಮಾತ್ರಕ್ಕೆ ನಾವು ಮಾಡತಕ್ಕ ಕಾರ್ಯವನ್ನು ಬಿಟ್ಟು ಕೆಲಸಮಾಡಲಕ್ಕೆ ಬರುವುದಿಲ್ಲ. ಆದುದರಿಂದ ವಿರೋಧಪಕ್ಷ ಹೇಗೇ ಇರಲಿ ನಮ್ಮ ಜವಾಬ್ದಾರಿ ಏನು ಎನ್ನುವುದನ್ನು ನಾವು ಅರಿತುಕೊಂಡು ಎಲ್ಲಾ ಪ್ರಜಾಕೋಟಿಯೂ ಒಂದೇ ಎನ್ನುವ ಮನೋಭಾವನೆಯಿಂದ ದೇಶದ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಯಾವ ಹಿತಾಸಕ್ತಿಗಳಿಗೂ ಬಲಿ ಬೀಳಬೇಕಾದ್ದಿಲ್ಲ, ಯಾವ ಸಂಖ್ಯಾ ಬಲಕ್ಕೂ ಒಳಗಾಗಬೇಕಾದ್ದಿಲ್ಲ, ಯಾವ ಪ್ರಭಾವಕ್ಕೂ ಸಿಕ್ಕಬೇಕಾದ್ದಿಲ್ಲ, ಆದರೆ ಅದು ಎಡೆ ಇಲ್ಲದೆ ಕೆಲವು ಸಮಯದಲ್ಲಿ ಆಗತಕ್ಕ ಅವಕಾಶ ಬರುತ್ತದೆ. ಆದುದರಿಂದ ಸರ್ವಪಕ್ಷೀಯ ಸರ್ಕಾರವನ್ನು ನಮ್ಮಲ್ಲಿ ಮಾಡಬೇಕು ಎಂದು ಹೇಳುವಾಗ—ಇವತ್ತಿನ ಪರಿಸ್ಥಿತಿ ಏನು ಎನ್ನುವುದನ್ನು ಅರಿತುಕೊಂಡು ನಾವು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆಯೇ ಹೊರತು ತುರ್ತು ಪರಿಸ್ಥಿತಿಯ ಕಾರಣವಿಟ್ಟು ಇದನ್ನು ಚರ್ಚೆ ಮಾಡುವುದು ಅಷ್ಟು ಸರಿಯಲ್ಲವೆಂದು ನನಗನ್ನಿಸುತ್ತದೆ.

ಸ್ವಾಮಿ, ಈ ತುರ್ತು ಪರಿಸ್ಥಿತಿಯಲ್ಲಿ ನಾನಾಗಲೇ ಹೇಳಿದ ಹಾಗೆ, ಸರ್ಕಾರವನ್ನು ನಡೆಸಿಕೊಂಡು ಹೋಗತಕ್ಕ ಹೊಣೆಗಾರಿಕೆ ಬಹು ಸದಸ್ಯರನ್ನುಳ್ಳ ಪಕ್ಷದ ಮೇಲೆ, ಸಂಸ್ಥೆಯ ಮೇಲೆ ಬಿದ್ದಿರುತ್ತದೆ. ಅವರು ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುತ್ತಿದ್ದಾರೆಯೇ ಎನ್ನುವುದಕ್ಕೆ ಈ ಸಭೆ ತನ್ನ ಅಭಿಪ್ರಾಯವನ್ನು ಸೂಚಿಸುತ್ತದೆ. ಈ ಪ್ರಜಾಪ್ರಭುತ್ವ ತತ್ವವನ್ನು ನಾವುಗಳು ಇಟ್ಟುಕೊಂಡಿರತಕ್ಕ ಕಾರಣದಿಂದ ಈ ಪ್ರಜಾಪ್ರಭುತ್ವದಲ್ಲಿ, ಇವತ್ತಿನ ಪರಿಸ್ಥಿತಿಯಲ್ಲಿ ಈ ತುರ್ತು ಪರಿಸ್ಥಿತಿಯೆಲ್ಲ ಬದಲಾವಣೆ ಮಾಡಬೇಕಾದ ಆವಶ್ಯಕತೆ ನನಗೆ ಕಾಣುತ್ತಿಲ್ಲ. ಯಾವ ದೃಷ್ಟಿಯಿಂದ ಪಕ್ಷಾತೀತವಾದ ಜನತಾ ಸರ್ಕಾರವನ್ನು ಸ್ಥಾಪನೆಮಾಡಬೇಕೆಂದು ಹೇಳುತ್ತಾರೆನ್ನುವುದು ನನಗೆ ಅರ್ಥವಾಗುತ್ತ ಇಲ್ಲ.

ನಾವು ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿಕೊಂಡಿರುವ ಕಾರಣ ಕೆಲವು ಕಹಿ ಸತ್ಯಗಳನ್ನು ಹೇಳಿದರೆ ಒಪ್ಪಿಕೊಳ್ಳಬೇಕಾಗುತ್ತದೆ. ಕಹಿಯಾದರೂ ಸತ್ಯವನ್ನು ಹೇಳಿದ ಮಾತ್ರಕ್ಕೆ ಸಭೆಯಲ್ಲಿ ಮೊದಲಸುವುದಾಗಲಿ, ಪಾರ್ಟಿಯಿಂದ ಹೊರಗೆ ಹಾಕುವುದಾಗಲೀ ನಡೆಹೋಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಎರೆಕ್ಷ್ ಭಾಷಣ ಮಾಡುತ್ತಿದ್ದಾರೆ, ಸ್ವಾಮಿ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಏಕಪಕ್ಷೀಯ ಸರ್ಕಾರ ಸರಿಯಾಗಿ ನಡೆಯುತ್ತಿದೆ ಎಂದು ಹೇಳಲೇಬೇಕು. ಅದಿಲ್ಲದೆ ಗತ್ಯಂತರವಿಲ್ಲ. ಇವೊತ್ತಿನ ಪರಿಸ್ಥಿತಿ ಹಾಗೆ ಇದೆ.

ಕೆಲವು ಕಹಿ ಸತ್ಯಗಳನ್ನು ಯಾರು ಹೇಳಿದರೂ ಅದಕ್ಕೆ ಗಮನ ಕೊಡಲೇಬೇಕು. ಪ್ರಜಾ ಪ್ರಭುತ್ವವನ್ನು ಒಪ್ಪಿಕೊಂಡಂಥ ಈ ಪಕ್ಷದವರು ನೀವುಗಳು ಹೇಳತಕ್ಕ ಕೆಲವು ಸತ್ಯಗಳನ್ನು ಒಪ್ಪಿಕೊಳ್ಳಲಿಲ್ಲವೆಗಳೆದ್ದರೆ ತಿದ್ದಿಕೊಳ್ಳುತ್ತೇವೆ. ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಲೇಬೇಕಾಗುತ್ತದೆ. ಆ ಕಾರಣದಿಂದ ಪ್ರಜಾಪ್ರಭುತ್ವ ತತ್ವಕ್ಕೆ ಒಳಗಾಗಿ ಮಾತನಾಡತಕ್ಕ ಅವಕಾಶ ನಮಗೆ ನಿಮಗೆ ದೊರಕುತ್ತದೆ. ನನಗನ್ನಿಸುತ್ತದೆ, ಈ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಸ್ಥಾಪನೆಯಾಗದೆ ಬೇರೆ ಸರ್ಕಾರವಿದ್ದಿದ್ದರೆ, ಬಹುಶಃ ಈ ಸಭೆಯಲ್ಲಿ ಇಷ್ಟು ವಿಪುಲವಾದ ಚರ್ಚೆಯನ್ನು ಒಬ್ಬರ ಮುಖಕ್ಕೆ ಒಬ್ಬರು ಮೂದಲಿಸುವ ರೀತಿಯಲ್ಲಿ ತೀವ್ರವಾದ ಚರ್ಚೆಯನ್ನು ನಡೆಸುವುದಕ್ಕೆ ಆಗುತ್ತಿರಲಿಲ್ಲವೋ ಏನೋ ಎಂದು ನನ್ನ ಅಭಿಪ್ರಾಯ.....

ಉಪಾಧ್ಯಕ್ಷರು.—ಮೊದಲಿಸುವ ಮಾತುಬೇಡ.

ಶ್ರೀ ಕೆ. ಎಸ್. ನೂರ್ಯನಾರಾಯಣ ರಾವ್.—ಆ ಮಟ್ಟಕ್ಕೆ ಹೋದರೂ ಅದನ್ನು ಕೇಳತಕ್ಕ ಸಂಯಮವಿದೆ ಎಂದು ಹೇಳುತ್ತೇನೆ. ಹೊಸದಾಗಿ ಸ್ವರಾಜ್ಯವನ್ನು ಗಳಿಸಿದಂಥ, ಇನ್ನೂ ಬೆಳವಣಿಗೆಯಾಗತಕ್ಕಂಥ ಅನೇಕ ದೇಶಗಳ ದೃಷ್ಟಾಂತವನ್ನು ತೆಗೆದುಕೊಂಡರೆ ಬಹುಶಃ ಬ್ರಿಟಿಷರನ್ನು ಬಿಟ್ಟರೆ ಬ್ಲೇರೆಲ್ಲಿಯೂ ಪ್ರಜಾಪ್ರಭುತ್ವ ಇಷ್ಟು ಯಶಸ್ವಿಯಾಗಿ ನಡೆಯಲು ಅವಕಾಶವಾಗಿಲ್ಲ. ನಮ್ಮ ಸ್ನೇಹಿತರು ಅದನ್ನು ನೋಡಿ ಅರ್ಥಮಾಡಿಕೊಂಡರೆ ಗೊತ್ತಾಗುತ್ತದೆಂದು ಕಾಣುತ್ತದೆ.

ಆ ಕಾರಣದಿಂದ ಇವೊತ್ತು ನಡೆಯತಕ್ಕ ಸರ್ಕಾರದಲ್ಲಿ ಕೆಲವು ನ್ಯೂನತೆಗಳು ವ್ಯತ್ಯಾಸಗಳು ಇದ್ದರೂ, ಸರ್ಕಾರವನ್ನು ಬದಲಾಯಿಸಿತಕ್ಕ ನ್ಯೂನತೆಗಳು ಕಂಡಿಲ್ಲ. ಇವೊತ್ತಿನ ಪರಿಸ್ಥಿತಿಯಲ್ಲಿ ಯಾವ ರೀತಿಯಲ್ಲಿಯೂ ಸಮ್ಮಿಶ್ರಸರ್ಕಾರ ಸ್ಥಾಪನೆ ಮಾಡತಕ್ಕ ಪರಿಸ್ಥಿತಿ ಉದ್ಭವವಾಗುವುದಿಲ್ಲ. ದೇಶದಲ್ಲಿ ಪರಿಸ್ಥಿತಿ ಶಾಂತವಾಗುತ್ತ ಬರುತ್ತಿದೆ. ಇಂಥ ಸಂದರ್ಭದಲ್ಲಿ ವಿರೋಧ ಪಕ್ಷದವರು ಈ ರೀತಿಯ ಸಮ್ಮಿಶ್ರ ಸರ್ಕಾರವನ್ನು ರಚಿಸುವ ಪ್ರಯತ್ನವನ್ನು ಮಾಡೋಣವೆಂದು ಹೇಳುವುದನ್ನು, ಚರ್ಚೆ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲವೆಂದು ಹೇಳಿ ನನಗೆ ಕೊಟ್ಟ ಅವಕಾಶಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

10-00 A.M.

†ಶ್ರೀ ಪಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ನಿರ್ಣಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಏಕಪಕ್ಷೀಯ ಸರಕಾರದಿಂದ ಇವತ್ತು ದೇಶದಲ್ಲಿ ಏನಾಗಿದೆ ಎಂದರೆ ಸಾವುಕಾರರು ಇನ್ನೂ ಹೆಚ್ಚು ಸಾವುಕಾರರಾಗುತ್ತಿದ್ದಾರೆ, ಬಡವರು ಹೆಚ್ಚೆಚ್ಚು ಬಡವರು ಆಗುತ್ತಿದ್ದಾರೆ. ಪಕ್ಷಾತೀತ ಸರಕಾರ ಅಂದರೆ ಅದರ ವ್ಯಾಖ್ಯಾನ ಬೇರೆ ರೀತಿಯಿಂದ ಮಾಡಬೇಕಾಗುತ್ತದೆ. ಸಮ್ಮಿಶ್ರ ಸರಕಾರ ರಚನೆ ಅಂದರೆ ಏನು? ಕೇರಳದಲ್ಲಿ ಸರಕಾರ ಮಾಡಿದ ಹಾಗೆಯೇ? ಇಂಥ ಸಮ್ಮಿಶ್ರ ಸರಕಾರ ರಚನೆ ಮಾಡುವುದು ಕಾಂಗ್ರೆಸ್ ಪಕ್ಷಕ್ಕೆ ಬಿಟ್ಟಿದ್ದು. ಇಂಥ ಸಮ್ಮಿಶ್ರ ಸರಕಾರ ರಚನೆಯಿಂದ ನೆಹರು ಅವರ ಮನಸ್ಸಿಗೆ ಬಹಳ ಅಸಮಾಧಾನವಾಯಿತು. ಇಂದು ದೇಶದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಏನಿದೆಯೋ ಅದನ್ನು ನೋಡಬಹುದು. ಹಾಗಾದರೆ ಪಕ್ಷಾತೀತ ಸರಕಾರ ರಚನೆ ಮಾಡುವುದಕ್ಕೆ ದಾರಿ ಯಾವುದು? ಯಾವುದಾದರೂ ದಾರಿ ಇದೆಯೇ? ಯಾವುದು ಸಾಧುವಾದುದು ಯಾವುದು ತ್ಯಾಜ್ಯವಾದುದು ಯಾವುದು ಸರಿಯಲ್ಲ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ನಾನು ಈಗ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಇದು ಯಾವ ಸಂದರ್ಭದಲ್ಲಿ ಸಾಧು ಎಂದರೆ ಇದು ಈಗ ಯಂತ್ರ ತಾಂತ್ರಿಕ ಯುಗವಾಗಿದೆ. ಇಂದಿನ ಯಂತ್ರ ತಾಂತ್ರಿಕ ಯುಗದಲ್ಲಿ ಇದಕ್ಕೆ ಅವಕಾಶ ಕಡಮೆ. ಇಂಡಿಯಾ ದೇಶದಲ್ಲಿ ಇದು ಬಂದಿದೆ. ಇಂದಿನ ದಿವಸ ಕಾಮರಾಜ ಪ್ಲಾನಿಗೆ ಇದೇ ಅರ್ಥ ಬರುತ್ತದೆ. ಕೇರಳದಲ್ಲಿ ಮಾಡಿದಂಥ ಕುಲಗೆಟ್ಟ ಸರಕಾರ ಮಾಡುವುದು ಸರಿಯಲ್ಲ. ಇನ್ನೊಂದು ಏನಪ್ಪಾ ಅಂದರೆ ಈಗ ನಮ್ಮ ದೇಶಕ್ಕೆ ಬಂದಿರುವ ಗಂಡಾಂತರವನ್ನು ಎದುರಿಸಲು ಸರ್ವ ಪ್ರಯತ್ನ ಮಾಡಬೇಕಾಗಿದೆ. ದೇಶದ ಸರ್ವತೋಮುಖ ಬೆಳವಣಿಗೆಯಾಗಬೇಕಾಗಿದೆ. ಈ ದೃಷ್ಟಿಯಿಂದ ಯೋಚನೆ ಮಾಡಿದರೆ ಅದಕ್ಕೆ ಅರ್ಥ ಬರುತ್ತದೆ. ಇಲ್ಲದಿದ್ದರೆ ಇದು ಅರ್ಥಶೂನ್ಯವಾಗುತ್ತದೆ. ಇವತ್ತಿನ ದಿವಸ ಯಾವುದು ಬಹಳ ಮುಖ್ಯವಾದ ವಿಷಯವೋ ಅದನ್ನು ಮೊದಲು ಗಮನಿಸಬೇಕಾಗಿದೆ. ಇಂದು ನಾವು ಯಂತ್ರ ತಾಂತ್ರಿಕ ಯುಗದಲ್ಲಿ ಇದ್ದೇವೆ. ಕಾಲ ಬದಲಾವಣೆಯಾಗುತಾ ಇದೆ. ಇಂದು ಹೊಸ ಹೊಸ

(ಶ್ರೀ ಎಂ. ವಿ. ದೇವ್)

ವಿಜ್ಞಾನ ಹುಡುಕಕೊಂಡು ಹೋಗುತ್ತಿದ್ದೇವೆ. It is a sign of control and communication in machines and animate beings. ಮನುಷ್ಯ ಇದಕ್ಕೆ ಹೊರತಾಗಿ ಇಲ್ಲ. ಸರಕಾರ ಇದನ್ನು ಹೇಗೆ ಅಪ್ಲೈ ಮಾಡಬೇಕು ಎಂಬುದನ್ನು ಮುಖ್ಯವಾಗಿ ಯೋಚನೆ ಮಾಡಬೇಕಾಗಿದೆ. ಸರಕಾರ ಜನರೇಟರ್ ಇದ್ದಹಾಗೆ. ಸರಕಾರ ಶಕ್ತಿ ಕೇಂದ್ರ ಇದ್ದ ಹಾಗೆ ಒಬ್ಬ ಮನುಷ್ಯ ಎಲ್ಲ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮಂತ್ರಿ ಮಂಡಳ ಥಾಟ್ ತರಹ ಇರಬೇಕು ವಿಭಜನೆ ಇಂದು ಇರತಕ್ಕ ಮುಖ್ಯ ಪ್ರಶ್ನೆಯಾಗಿದೆ. ರಾಜ ಎಲ್ಲ ಮಾಡುತ್ತಾನೆ ಎಂದು ಹೇಳಲು ಈ ಕಾಲದಲ್ಲಿ ಸಾಧ್ಯವಿಲ್ಲ. ಆದುದರಿಂದ ಇದನ್ನು ಆಳವಾಗಿ ಯೋಚನೆ ಮಾಡಿ ನೋಡಿದರೆ ತತ್ವಕ್ಕೆ ಅನುಸಾರವಾಗಿ ನಡೆಯತಕ್ಕ ಮುಂದಾಳು ಸರಕಾರದಲ್ಲಿ ಇರಬೇಕು. ಇದು ಅಗತ್ಯ. ಸರಕಾರ ಜನರೇಟರ್ ಆದ ಮೇಲೆ ಸರಕಾರದಿಂದ ಜನತೆಯ ಕಲ್ಯಾಣವಾಗಬೇಕು. ಅದಕ್ಕಾಗಿಯೇ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಬೇಕು ಎಂದು ಹೇಳುವುದು. ಜನತೆ ಮುಂದುವರಿಯದೇ ಇದ್ದರೆ ಷಾರ್ಟ್ ಸರ್ಕಿಟ್ ಆಗುತ್ತದೆ. ಶಕ್ತಿಕೇಂದ್ರವಾದ ಸರಕಾರ ತನ್ನ ಆಕರ್ಷಕ ಶಕ್ತಿಯನ್ನು ಕಳೆದುಕೊಂಡರೆ ನಮ್ಮ ದೇಶದ ಜನತೆ ಅಧೋಗತಿಗೆ ಇಳಿಯುತ್ತಾರೆ ಎಂದು ಖಡಾ ಖಂಡಿತವಾಗಿ ಹೇಳುತ್ತೇನೆ. ಕೇರಳದಲ್ಲಿ ಆದ ಹಾಗೆ ನಮ್ಮಿಷ್ಟ ಸರಕಾರ ಆಗಬಾರದು. ಆದರೆ ಯಾವ ತರಹ ಆಗಬೇಕು ಎಂಬುದಕ್ಕೆ ನೆಹರು ಅವರು ಒಂದು ಉದಾಹರಣೆಯನ್ನು ತೋರಿಸಿದ್ದಾರೆ. ಶ್ರೀ ಸಿ. ಡಿ. ದೇಶಮುಖ ರವರು ಇಂಡಿಪೆಂಡೆಂಟ್ ಆಗಿದ್ದರೂ ಅವರನ್ನು ನೆಹರು ಅವರು ಮಂತ್ರಿಮಂಡಳದಲ್ಲಿ ತೆಗೆದುಕೊಂಡು ಅರ್ಥಸಚಿವರನ್ನಾಗಿ ಮಾಡಿದರು. ಈ ತತ್ವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಂತ್ರಿಮಂಡಳ ರಚನೆ ಮಾಡಬೇಕು. ಬಹುಶಃ ಈ ತತ್ವಕ್ಕೆ ಅನುಗುಣವಾಗಿ ಕೇರಳದಲ್ಲಿ ಇರಲಿಲ್ಲ ಎಂದು ಕಾಣುತ್ತದೆ. It was an experiment, ಸೌಥ್ ಈಸ್ಟ್ ಏಷಿಯಾ ದೇಶಗಳಲ್ಲಿ ನೋಡಿದರೂ ಕೂಡ ಒಂದು ಪಕ್ಷದ ಸರಕಾರ ರಚನೆಯಾಗಿದ್ದರೂ ಯಾವ ಪಕ್ಷಕ್ಕೂ ಸೇರದೆ ಇರತಕ್ಕಂಥವರು ಮುಖ್ಯಮಂತ್ರಿಗಳಾಗಿದ್ದಾರೆ. ಇನ್ನೊಂದು ಏನಪ್ಪಾ ಅಂದರೆ ನನಗೆ ಅನಿಸುತ್ತದೆ ಕಾಮರಾಜ ಪ್ಲಾನ್ ಪ್ರಕಾರ ಭ್ರಷ್ಟಾಚಾರ ಹೋಗಿ ಮುಖ್ಯವಾಗಿ ತತ್ವಕ್ಕೆ ಅನುಗುಣವಾಗಿ ಮಂತ್ರಿ ಮಂಡಳ ರಚನೆಯಾಗಬೇಕು. ಇಲ್ಲದಿದ್ದರೆ ದೇಶಕ್ಕೆ ಆಗಬಾರದ್ದು ಆಗುತ್ತದೆ. ಪ್ರತಿಯೊಂದು ಪಾರ್ಟಿಯಲ್ಲಿ ಕೂಡ ಧ್ಯೇಯ ಕುಲಗೆಟ್ಟು ಹೋಗಿದೆ. ಪಾರ್ಟಿ ಧ್ಯೇಯ ಒಂದು ಇದ್ದರೆ ತಮ್ಮ ಸ್ವಾರ್ಥಕ್ಕೆ ಅದನ್ನು ಉಪಯೋಗಿಸುತ್ತಾರೆ, ಸ್ವಾರ್ಥಕ್ಕಾಗಿ ಮಾತನಾಡುತ್ತಾರೆ. ಈ ದೃಷ್ಟಿಯಿಂದ ಇದಕ್ಕೆ ಒಂದು ಮದ್ದು ಇದೆ.

Sri S. RAJAGOPAL (K.G.F.).—To what group Sri Deo belongs ?

Sri V. M. DEO.—I am an independent and for socialistic pattern of society.

ನಿಜವಾಗಿಯೂ ಹೇಳಬೇಕಾದರೆ ಇದನ್ನು ಯೋಚನೆ ಮಾಡತಕ್ಕಂಥ ಕಾಲ ಇಂದು ಬಂದಿದೆ. ಕಾಮರಾಜ ಪ್ಲಾನ್ ಪ್ರಕಾರ ನಾಲ್ಕು ಜನ ಮಂತ್ರಿಗಳನ್ನು ಕಿತ್ತಿಹಾಕಬಹುದು. ಮೊದಲು ಕೈಗಾರಿಕಾ ಮಂತ್ರಿಗಳು ಹೋಗಬೇಕಾಗುತ್ತದೆ. We owe a duty to the out-going Ministers when the Cabinet is reconstituted so that they will take such members into the cabinet who reflect the ideology rather than anything else.

ನನ್ನ ಮುಖ್ಯವಾದ ವಾದ ಎಂದರೆ ಮಂತ್ರಿಮಂಡಲದಿಂದ ಆಚೆಗೆ ಹೋಗಬೇಕಾದ ಮಿನಿಸ್ಟರು ಅಲ್ಲೇ ಕುಳಿತರೆ ಮಂತ್ರಿಮಂಡಲದಲ್ಲಿ ವರ್ಚಸ್ಸು ಅಗಲ ಜನತೆಗೆ ಕಲ್ಯಾಣವಾಗಲಿ ಏನೂ ಆಗುವುದಿಲ್ಲ, ಇದ್ದರೂ ಸತ್ಕಂತೆ ಇರುವ ಮಂತ್ರಿಮಂಡಲವಾಗುತ್ತದೆಯೇ ಹೊರತು ಯಾವ ಪ್ರಯೋಜನವೂ ಆಗುವುದಿಲ್ಲ, ಇಲ್ಲ ಹೇಳಿರುವಂತೆ ಮಾಡಿದ್ದರೆ ಈ ತರಾವತಿ ಪ್ರಕರಣವೇ ಬರುತ್ತಿರಲಿಲ್ಲ, ಏನಿಲ್ಲ ಎಂದರೂ ಒಂದು ಸಾವಿರ ಸಿಮೆಂಟ್ ಮೂಟೆ ಅಲ್ಲಿ ಕದ್ದಿರಬೇಕು, ನೀವು ಕಂಟ್ರಾಕ್ಟರ್ ಹತ್ತಿರ ಹೋಗಿ ಏನಾದರೂ ಕೇಳಿದರೇನು ? ನಿಮ್ಮನ್ನು ಏನಾದರೂ ಕೇಳಿದರೆ ಬಹಳ ಚೆನ್ನಾಗಿ ವಿವರಣೆ ಕೊಡುತ್ತೀರಿ: ಎಲೆಕ್ಷನ್ ಟೈಂನಲ್ಲಿ ಅವರನ್ನು ಹಿಡಿದು ಇಟ್ಟುಕೊಳ್ಳದಿದ್ದರೆ ನಮ್ಮ ಗತಿ ಏನು ಅಂದು ಕನ್ವಿನ್ಸ್ ಮಾಡುತ್ತೀರಿ. ನನಗೆ ಆಶ್ಚರ್ಯವಾಯಿತು. ಈ ವಿಚಾರದಲ್ಲಿ ಯಾಕ್ಟ್ರಾದವಿಂದ ತಿಳಿವಳಿಕೆ ಕೊಡುವುದಕ್ಕೆ ಬದಲಾಗಿ ಒಂದು ಉದಾಹರಣೆಯ ಮೂಲಕ ತಮಗೆ ಹೇಳುತ್ತೇನೆ ನಾನು ಈ ಅಸೆಂಬ್ಲಿಗೆ ಬರುವುದಕ್ಕೆ ಕಾರಣವೇನು ಎಂಬುದು ಹೀಗೆ ಇದೆ : ನಾನು ನಮ್ಮ ಊರನ್ನು ಬಿಟ್ಟು ಬಹಳ ವರ್ಷವಾಗಿತ್ತು, ಎಲ್ಲಿಂದಲೋ ಚಂದ್ರಲೋಕದಿಂದ ಬಂದಹಾಗೆ

ಪ್ಯಾರಾಚ್ಯೂಟ್‌ನಲ್ಲಿ ಬಂದು ನಮ್ಮ ಊರಿಗೆ 6-7 ವರ್ಷಗಳ ಹಿಂದೆ ಸೇರಿಕೊಂಡೆ, ನಮ್ಮ ಊರಿನಿಂದ 5 ಮೈಲಿ ದೂರದಲ್ಲಿರುವ ನೆಂಟರು ಯಾರಿದ್ದಾರೆ ಎಂಬುದು ನನಗೆ ಗೊತ್ತಿರಲಿಲ್ಲ. ಜನತೆಯ ಸಂಪರ್ಕವಾಗಲೀ ಹಳ್ಳಿಯಪರ ಸಂಪರ್ಕವಾಗಲೀ ಸ್ವಲ್ಪವೂ ನನಗೆ ಇರಲಿಲ್ಲ. ನನ್ನಷ್ಟಕ್ಕೆ ನಾನೇ ಇದ್ದುಬಿಡೋಣ ಎಂದುಕೊಂಡು ನಾನು ಇದ್ದೆ. ನನ್ನ ಪುಸ್ತಕ ಆಯಿತು ನಾನಾಯಿತು ಎಂದು; ಆದರೂ ಈ ಕಾಂಗ್ರೆಸ್ ಸರ್ಕಾರ ನನ್ನನ್ನು ಬಿಡಲಿಲ್ಲ. ಇದ್ದಕ್ಕಿದ್ದಹಾಗೆ ಪಂಚಾಯ್ತಿ ರಾಜ್ಯ ಎಂದು ಮಾಡಿದರು. ಅದಾದ ಮೇಲೆ ತಾಲ್ಲೂಕ ಬೋರ್ಡ್ ಆಯಿತು, ಪಂಚಾಯ್ತಿಯಲ್ಲಿ ಅಷ್ಟೋ ಇಷ್ಟೋ ಹೆಸರುಗಳಿದ್ದವು. ಯಾರೂ ಕಂಟೆಸ್ಟ್ ಮಾಡಲಿಲ್ಲ. ಹಾಗೆಯೇ ಜುನಾಯಿತನಾಗಿ ಬಂದು ಬಿಟ್ಟೆ. ಪ್ರತಿಯೊಂದು ಊರಿನಲ್ಲೂ ಗೌಡರು ಶ್ಯಾನುಭೋಗರನ್ನು ಹಿಡಿದುಕೊಂಡು ಹೋದರೆ ಮುಳುಗಿ ಹೋಗುತ್ತೀನೆ. ಏನು ಮಾಡುವುದು ಕೊನೆಗೆ ಒಂದು ತೀರ್ಮಾನಕ್ಕೆ ಬಂದೆ. ಅವರು ಒಬ್ಬರನ್ನೂ ಕೇಳುವುದು ಬೇಡ. ತೀರ ಬಡವರ ಹತ್ತಿರ ಹೋಗೋಣ ಎಂದು ಹೇಳಿ ಹಳ್ಳಿಯಲ್ಲರ ತಕ್ಕ ಹರಿಜನರ ಕಾಲೋನಿಯಲ್ಲಿ ಯಾವ ಮನೆ ತೀರ ಬಡ್ಡುಹೋಗುತ್ತಿದೆಯೋ ಅವರ ಹತ್ತಿರ ಹೋಗಿ ಕೇಳಿಕೊಂಡೆ. ಎಷ್ಟೋ ಜನ ಗೌಡರ ಮನೆಗೆ ಶ್ಯಾನುಭೋಗರ ಮನೆಗೆ, ಜೊಡ್ಡ ಸಾಹುಕಾರರ ಮನೆಗೆ ಹೋಗಿ ಕೇಳಿಕೊಳ್ಳಿ ಎಂದು ಹೇಳಿದರು. ನಾನು ಹೇಳಿದೆ. ಅವರನ್ನು ಕೇಳಿಕೊಂಡರೆ 5 ಓಟು ಸಿಕ್ಕುವುದಿಲ್ಲ. ಅವರನ್ನು ನಿಕೆ ಕೇಳಿಕೊಳ್ಳಬೇಕು ಎಂದು ಕೊನೆಗೆ ಜುನಾವಣೆ ಮುಗಿಯುವ ಹೊತ್ತಿಗೆ ಅಲ್ಲಿನ ದೃಶ್ಯವೇ ಬದಲಾವಣೆಯಾಯಿತು. ಅದಕ್ಕೆ ಕಾರಣ ಇಷ್ಟೇ. ಜನರೆಲ್ಲಾ ಮಾತನಾಡಿಕೊಳ್ಳುತ್ತಾ ಇದ್ದುದು ಏನೆಂದರೆ ಧೀರ ಎಂದರೆ ಇವನೇ ಧೀರ ಕಣಯ್ಯ ಗೌಡ ಆಗಲಿ, ಶ್ಯಾನುಭೋಗ ಆಗಲಿ ಯಾರ ಹತ್ತಿರವೂ ಹೋಗದೆ ಸಾಮಾನ್ಯ ಜನರಿಂದ ಓಟು ಗಳಿಸಿಕೊಂಡು ಜಯಶೀಲನಾಗಿ ಬರಲಿ ಎಂದು ಮಾತನಾಡಿಕೊಳ್ಳುವುದಕ್ಕೆ ಶುರು ಆಯಿತು. ಇದರಿಂದ ನಮಗೆ ಏನು ಗೊತ್ತಾಗುತ್ತದೆ ಎಂದರೆ ನಿಮಗೆ ಜನಗಳ ಬೆಂಬಲ ಇಲ್ಲ, ಈ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಬಿಟ್ಟರೆ ಮುಂದಿನ ಚುನಾವಣೆಯಲ್ಲಿ ವಳಗುತ್ತೀರಿ ಎಂಬ ಒಂದು ಭಯ ಇದೆ, ಆ ರೀತಿ ಒಂದು ಭಾವನೆಯನ್ನು ಬಿಟ್ಟು ಜನತೆಯಲ್ಲಿ ಒಂದು ನಂಬಿಕೆಯನ್ನು ಇಟ್ಟುಕೊಳ್ಳಿ. ಗೂಳಿಗಳನ್ನು ಮೇಯಿಸಿದ ಹಾಗೆ ಕಂಟ್ರಾಕ್ಟರುಗಳನ್ನು ಮೇಯಿಸಿದರೆ ಮುಂದಿನ ಚುನಾವಣೆಯಲ್ಲಿ ಆರಿಸಿಬರುತ್ತೀರಿ. ಇಲ್ಲದೇ ಇದ್ದರೆ ಇತಿಶ್ರೀ ಆಗುತ್ತದೆ ಎಂಬ ಭಾವನೆಯನ್ನು, ದೃಷ್ಟಿಯನ್ನು ಇಟ್ಟುಕೊಳ್ಳುವುದು ಬಹಳ ಕೆಟ್ಟದ್ದು—ಕೇಳುವುದಕ್ಕೆ ಎಂದು ಹೇಳುವುದಿಲ್ಲ—ಬಹಳ ತಪ್ಪು ಲೆಕ್ಕಾಚಾರ ಎಂದು ನಾನು ಈ ಸಂದರ್ಭದಲ್ಲಿ ಹೇಳಬೆಕ್ಕೆ, ಆ ದೃಷ್ಟಿಯಿಂದ ನೀವು ಹೆನ್ನಾಗಿ ಯೋಚನೆ ಮಾಡಿ ಮುಂದೆ ಏನು ಮಾಡಬೇಕೋ ಅದನ್ನು ಮಾಡಬೇಕು. ನಮ್ಮ ಇಂಡಿಯಾದೇಶದ ಜನಸಂಖ್ಯೆಯಲ್ಲಿ ಡಾಕ್ಟರ್ ಲೋಹಿಯಾರವರು ಹೇಳುವ ಹಾಗೆ ದಿನಕ್ಕೆ 3 ಆಣೆ ಆದಾಯದಿಂದ 27 ಕೋಟಿ ಜನ ಜೀವನ ಮಾಡುತ್ತಾ ಇದ್ದಾರೆ. ಅದಕ್ಕೂ ತೀರ ಕೆಳಮಟ್ಟದಲ್ಲಿ ಜೀವನ ಮಾಡುತ್ತಾ ಇರುವವರು ಎಷ್ಟೋ ಜನ ಇದ್ದಾರೆ. ಏಕೆ ಈ ರೀತಿ ಆಯಿತು ನಿಮ್ಮ ಮನೋಭಾವ ತತ್ವ ಏನಿದೆ ಅದಕ್ಕೆ ವಿರುದ್ಧವಾಗಿ ಕಾರ್ಯಾಚರಣೆ ಮಾಡಿದ್ದರಿಂದ ಶಕ್ತಿ ಇಲ್ಲದ ಹಾಗಾಗಿದೆ, ಮಂತ್ರಿಮಂಡಲ ಸ್ಥಾನ ಎನ್ನುವುದು ಅಧಿಕಾರ ಸ್ಥಾನವೇ ಹೊರತು ಶಕ್ತಿಯುತ ಸ್ಥಾನವಲ್ಲ. ಅಧಿಕಾರ ಸ್ಥಾನದಲ್ಲಿ ಯಾವಾಗ ಶಕ್ತಿಯಿಲ್ಲವೋ, ಯಾವಾಗ ಧ್ಯೇಯ ಇಲ್ಲವೋ ಆಗ ನೀವು ಏನನ್ನೂ ಸಾಧಿಸಲಾರಿರಿ. ಆ ದೃಷ್ಟಿಯಿಂದ ನಾನು ಕೇಳಿಕೊಳ್ಳುವುದೇನೆಂದರೆ ಪ್ರತಿಭಾವಂತ ನಾಯಕರು ಇದ್ದರೆ, ಪ್ರತಿಭಾವಂತ ಸದಸ್ಯರು ಇದ್ದರೆ ದೇಶಕ್ಕೆ ಒಳ್ಳೆಯದು ಆಗುತ್ತದೆಯೇ ಹೊರತು ಈಗ ಯಾವ ಪರಿಸ್ಥಿತಿ ಇದೆಯೋ ಅದನ್ನೇ ಮುಂದುವರಿಯುವುದಕ್ಕೆ ಬಿಟ್ಟರೆ ಅಟ್ಟೆಕ್ಸೀವ್ ಕಂಡಿಷನ್‌ನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವ ಮಂತ್ರಿಮಂಡಲ ಬಂದರೂ ಎದ್ದು ಹೋಗುತ್ತದೆ; ಅಷ್ಟೇ ಅಲ್ಲದೇ ಈಗಿರುವುದಕ್ಕಿಂತ ಹೊಲಸು ಜನ ಬರುವುದಕ್ಕೆ ದಾರಿಯಾಗುತ್ತದೆ. ಆದ್ದರಿಂದ ಪ್ರಪಂಚದಲ್ಲಿ ಈಗ ಯಾವ ಒಂದು ಪರಿಸ್ಥಿತಿ ಇದೆ ಎಂಬುದನ್ನು ನಾವು ಈ ಸಂದರ್ಭದಲ್ಲಿ ನೋಡಬೇಕು. ಜನತೆಗೆ ಕಲ್ಯಾಣವಾಗುವುದು ಬೇಡ ಎನ್ನತಕ್ಕ ಮಂತ್ರಿಮಂಡಲ ಆಗಲಿ ಯಾವ ಪಾರ್ಟಿಯಾಗಲಿ ನಾಲ್ಕು ದಿವಸ ಅಧಿಕಾರದಲ್ಲಿರಬಹುದೇ ಹೊರತು ಕಟ್ಟಕಡೆಗೆ ಅಧಿಕಾರದಿಂದ ಚ್ಯುತಿಹೊಂದುವುದು ಖಂಡಿತ. ನೀವು ಈಗೇನೋ ಬಹಳ ಸಂತೋಷದಿಂದ ಕುಳಿತುಕೊಂಡಿರಬಹುದು. But you are sitting on a border key. ಹಾಗೇ ಕುಳಿತುಕೊಂಡಿರುವುದಕ್ಕೆ ಸಾಧ್ಯವಿಲ್ಲ. ಪ್ರಪಂಚದಲ್ಲಿ ದಿನ ದಿನಕ್ಕೆ ಬದಲಾವಣೆಗಳಾಗುತ್ತಿರುತ್ತವೆ. ಈಗಿನ ಗಂಡಾಂತರ ಎಂದರೆ ನಿಮ್ಮ ತಾತ್ವಿಕ ಭ್ರಷ್ಟಾಚಾರ. ಈ ಬಿಪಸ ಜನತೆಯ ಹೆಸರಿನಲ್ಲಿ ಜನತೆಗಾಗಿ ಕೆಲಸಮಾಡುತ್ತಿದ್ದೇವೆ, ಜನತೆಗಾಗಿ ದೇಶಕ್ಕಾಗಿ ದುಡಿಯುತ್ತಿದ್ದೇವೆ ಎಂದು ಬಾಯಿನಲ್ಲಿ ಹೇಳಿಕೊಳ್ಳುತ್ತ, ಜನ ಎಲ್ಲಯಾದರೂ ಹಾಳಾಗಲಿ ನಾನು ಒಟ್ಟು ಬದುಕಿದರೆ ಸಾಕು ಎಂಬ ಭಾವನೆ ಎಲ್ಲೆಲ್ಲೂ ಬೆಳೆಯುತ್ತಿದೆ. ಆದರೆ ಇದರಿಂದ ದೇಶ ಖಂಡಿತವಾಗಿ ಉದ್ಧಾರವಾಗುವುದಿಲ್ಲ. ದೇಶದಲ್ಲಿ ನರ್ವತೋಮುಖನಾದ ಏಳಿಗೆ ಆಗುವುದಿಲ್ಲ.

(ಶ್ರೀ ಪಿ. ಎಂ. ದೇವ್)

ಈ ದೃಷ್ಟಿಯಿಂದ ಇದನ್ನು ಆಳವಾಗಿ ಆಲೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ಜರ್ಮನಿಯಲ್ಲಿ ಪಾರ್ ಆಯಿತು. ಅಲ್ಲಿದ್ದ ನಾಜಿಜಂ ಈಗ ಏನಾಯಿತು ? ಹೀಗೇ ಪ್ರತಿ ಒಂದು ಜನಾಂಗಕ್ಕೂ ಒಂದೊಂದು ಡೆಸ್ಟಿನಿ ಇರುತ್ತದೆ. ಈ ದಿವಸ ನಮ್ಮ ಒಂದು ಡೆಸ್ಟಿನಿ ಎಲ್ಲಿದೆ ಎಂಬುದನ್ನು ಹೇಳಬೇಕಾದರೆ ಅದು ನಮ್ಮ ಈ ಕರ್ಣಾಟಕದಲ್ಲಿದೆ. ಅದು ಈಗ ಹಳೇ ಮೈಸೂರ ನ್ನೊಳಗೊಂಡಿದೆ. ಆದರೆ ಆರ್ಥಿಕವಿಚಾರದಲ್ಲಿ ಇದು ಆ ಮದ್ರಾಸಿಗಿಂತ ಕಡಮೆ ಇರುತ್ತದೆ. ಮೈಸೂರಿನಲ್ಲಿ ಪಬ್ಲಿಕ್ ಸೆಕ್ಟಾರ್ ಆ ಮದ್ರಾಸಿಗಿಂತ ಜಾಸ್ತಿ ಇದ್ದರೂ ಇಲ್ಲಿ ಆರ್ಥಿಕ ಬೆಳವಣಿಗೆ ಬಹಳ ಕಡಮೆ. ಆದರೆ ಶ್ರೀ ಕಾಮರಾಜ ನಾಡರರು ಅದನ್ನು ಮಾಡದೆ ಇರುವುದರಿಂದ ಅಲ್ಲಿ ಈ ದಿವಸ ದೇಶ ಇಬ್ಭಾಗವಾಗತಕ್ಕ ಗರಾಚೆಗಳಿದ್ದಿವೆ. ಡಿ. ಎಂ. ಕೆ. ಅವರ ಗರಾಚೆ ಅಲ್ಲ ಜಾಸ್ತಿ ಯಾಗಿದೆ. ಆದರೆ ಇಲ್ಲ ನಮ್ಮ ವೈಶಿಷ್ಟ್ಯವೇ ಒಂದು ರೀತಿ ಬೆಳೆದುಕೊಂಡು ಬಂದಿದೆ. ಈ ಕೈಗಾರಿಕೆಗಳನ್ನು ಬೆಳೆಸಿಕೊಂಡು ಹೋಗುವುದರಲ್ಲಿ ಯಾರೊಬ್ಬರಿಗೂ ನೋವಾಗಬಾರದೆಂದು ನೆಹರೂ ಅವರ ಪಾಲಸಿ. ಈಗ ನಾವು ಕೈಗೊಂಡಿರತಕ್ಕ ಪಂಚವಾರ್ಷಿಕ ಯೋಜನಗಳೀನಿಪೆ ಅವುಗಳ ಸಕ್ಸೆಸ್ ಮೇಲೆ ನಿಂತಿದೆ ನಮ್ಮ ಡೆಸ್ಟಿನಿ. ಈ ದಿವಸ ಮಂತ್ರಿಗಳು ತಮ್ಮ ಒಂದು ಪಾರ್ಟಿ ಪಕ್ಷದ ಮನೋಭಾವವನ್ನು ಬಿಟ್ಟು ಎಲ್ಲ ಜನಗಳ ಜೊತೆಯಲ್ಲಿ ಸೇರಿ ಕೆಲಸ ಮಾಡಬೇಕೆಂಬ ಮನೋಭಾವ ತಮ್ಮಲ್ಲಿ ಬೆಳೆದರೆ ಆಗ ಕಾಮರಾಜ ಪ್ಲಾನನ್ನು ತಾವು ಜಾರಿಗೆ ತಂದ ಹಾಗೇ ಆಗುತ್ತದೆ. ಆ ದೃಷ್ಟಿಯಿಂದ ಇದನ್ನು ಪರಿಶೀಲಿಸಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ಪೀಮ್, ಈ ಖಾಸಗೀ ನಿರ್ಣಯದಲ್ಲಿ ಒಂದು ಪಕ್ಷಾತೀತ ಸರ್ಕಾರ ಬೇಕು ಎಂದು ತಂದಿರತಕ್ಕ ಈ ನಿರ್ಣಯವೇನಿದೆ ಇದು ಈ ಕಾಲಕ್ಕೆ ಬಹಳ ಸನ್ನಿಹಿತವಾಗಿದೆ. ಅದರಲ್ಲೂ ಈ 1963ನೆಯ ಇಸ್ವಿಯಲ್ಲಿ ಅದರಲ್ಲೂ ದೇಶದಲ್ಲಿ ಒಂದು ಯುದ್ಧ ಭಯ ಉಂಟಾಗಿ, ದೇಶ ಯುದ್ಧದ ಮಡಿಲನಲ್ಲಿ ಬಿದ್ದಿರುವಾಗ ಇದು ಬಹಳ ಅಗತ್ಯವಾದುದು ಎರಿದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಡೆಮೋಕ್ರೆಟಿಕ್ ಪ್ರಜಾಪ್ರಭುತ್ವದಲ್ಲಿ ನಾವು ಮುಖ್ಯವಾಗಿ ಮೂರು ವಿಚಾರಗಳನ್ನು ನೋಡಬೇಕಾಗಿದೆ. ಅವು ಯಾವುವೆಂದರೆ: ಲಿಬರಾಲಿಟಿ, ಈಕ್ವಾಲಿಟಿ ಮತ್ತು ಫ್ರೆಟರ್ನಿಟಿ ಈ ಮೂರನ್ನು ಈಗ ನಮ್ಮ ರಾಜ್ಯಾಂಗದಲ್ಲಿ ಸೇರಿಸಿದ್ದಾರೆ. ಒಂದೇ ಪಕ್ಷದವರು ಈ ನಾಲ್ಕರ ಆಡಳಿತವನ್ನೂ ಹಿಡಿದರೆ ಅವರಿಗೆ ಅವುಗಳನ್ನು ಕಾರ್ಯಗತಮಾಡುವುದ ಕ್ಕಾಗುವುದಿಲ್ಲ. ಒಂದೇ ಪಕ್ಷ ಆಡಳಿತವನ್ನು ನಡೆಸುತ್ತಿದ್ದರೆ ಅವರಿಗೆ ಈ ಈಕ್ವಾಲಿಟಿ ಎಂಬ ತತ್ವ ವನ್ನು ಆಚರಣೆಗೆ ತರುವುದಕ್ಕೆ ಸಾಧ್ಯವಿರುವುದಿಲ್ಲ. ಬಹಳ ಕಷ್ಟವಾಗುತ್ತದೆ. ಈ ದಿವಸ ಇರತಕ್ಕ ಆಳುವ ಪಕ್ಷಕ್ಕೆ ಕೇವಲ ಅದು ಅವರ ಒಂದು ಪಕ್ಷಕ್ಕೆ ಮಾತ್ರ ಜವಾಬ್ದಾರಿಯನ್ನು ಹೊತ್ತಿರುತ್ತದೆ. ಅದು ಬೇರೆ ಪಕ್ಷಗಳ ಜವಾಬ್ದಾರಿಯನ್ನು ಹೊತ್ತಿರುವುದಿಲ್ಲ. ಅದು ದೇಶದ ಜವಾಬ್ದಾರಿಯನ್ನೂ ಸಹ ಹೊತ್ತಿರುವುದಿಲ್ಲ. ಅಂದಮೇಲೆ ಈ ಸರ್ಕಾರಕ್ಕೆ ಜನರ ಕುಂದು ಕೊರತೆಗಳೇನೆಂಬುದು ಅನಗತ್ಯ. ಆದರೆ ಆಳುವ ಪಕ್ಷ ಒಂದರ ಜವಾಬ್ದಾರಿ ಈ ಪಕ್ಷದಮೇಲೆ ಇದ್ದಹಾಗಾಯಿತು. ಇದಕ್ಕೆ ದೇಶಾಭಿವೃದ್ಧಿಯ ಕೆಲಸಗಳ ಕಡೆಗೆ ಲಕ್ಷ್ಯ ಇರುವುದಿಲ್ಲ. ದೇಶದ ಜನರು ಪಡುತ್ತಿರುವ ಕಷ್ಟವನ್ನು ಆಡಳಿತ ಪಕ್ಷ ಕಣ್ಣಾರೆ ಕಂಡಾಗ್ಲೂ ಕಿವಿಯಾರ ಕೇಳಿದಾಗ್ಲೂ ಅವರ ಮನಸ್ಸಿನಲ್ಲಿ ಆ ತೊಂದರೆ ಗಳನ್ನು ನಿವಾರಣೆ ಮಾಡಬೇಕು ಎಂಬ ಮನಸ್ಸಿದ್ದಾಗ್ಲೂ ಆಳುವ ಪಕ್ಷದ ಹಿಡಿತಕ್ಕೆ ಕಟ್ಟು ಬಿದ್ದು ಸರ್ಕಾರ ಕಣ್ಮುಮುಚ್ಚಿ ಕೆಲಸಮಾಡಬೇಕಾಗಿರುತ್ತದೆ. ಮಂತ್ರಿಮಂಡಲದಲ್ಲಿ ಕೆಲವು ಸುಬುದ್ಧಿ ಯುಳ್ಳ ಮಂತ್ರಿಗಳಿದ್ದರೂ ಅವರು ಆಳುವ ಪಕ್ಷ ಒಪ್ಪುವಂತೆ ಕೆಲಸಮಾಡಬೇಕಾಗಿರುತ್ತದೆ. ಹೀಗಾಗಿ ಅವರೂ ಕೂಡ ಸತ್ಯಧರ್ಮಗಳನ್ನು ದೂರಮಾಡಬೇಕಾಗಿ ಬರುತ್ತದೆ. ಅದಕ್ಕೆಲ್ಲ ಅವ ಕಾಶವಿದೆ.

10-30 A.M.

ಇದಕ್ಕೆ ಕಾರಣವೇನೆಂದರೆ ತಾವು ಒಂದು ಪಕ್ಷವನ್ನು ಬೆಳೆಸಿಕೊಂಡು ಆ ಪಕ್ಷದ ಮೂಲಕ ಸರಕಾರವನ್ನು ಕಟ್ಟುವುದಕ್ಕೆ ಸಾಧ್ಯವಾಗತ್ತದೆ. ಇದರಿಂದ ಪಕ್ಷ ಬೆಳೆಸುವುದಕ್ಕೆ ಸಹಾಯವಾಗು ತ್ತದೆಯೇ ಹೊರತು ಸರಕಾರ ಕಟ್ಟುವುದಕ್ಕಾಗುವುದಿಲ್ಲ. ಪ್ರಜಾಪ್ರಭುತ್ವ ತತ್ವದ ಅನುಗುಣವಾಗಿ ತಾವು ಮೆಜಾರಿಟಿಯಲ್ಲಿ ಬಂದು ಇಲ್ಲಿ ನಿಂತಿದ್ದೀರಿ. ಆ ಪಾಪ್ಯುಲಾರಿಟಿಯನ್ನುಳಿಸಿಕೊಂಡು ಬರು

ಪುದಕ್ಕೋಸ್ಕರ, ಅದಕ್ಕೆ ತಕ್ಕಂತಹ ದಾರಿಯಲ್ಲಿ ಪ್ರಜಾಪ್ರಭುತ್ವ ಮಾರ್ಗಗಳನ್ನು ಹಿಡಿಯಲೇ ಬೇಕಾಗುತ್ತದೆ. ಅಂತಹ ಯೋಜನೆಗಳನ್ನು ಮಾಡಬೇಕಾಗುತ್ತದೆ. ಈ ಸರಕಾರದಿಂದ ಮಾಡ ಬೇಕಾದ ಕೆಲಸಗಳು ತತ್ವಶಃ ವಿರೋಧಪಾರ್ಟಿಯ ದೃಷ್ಟಿಯಿಂದ ಮಾಡಬೇಕೆಂದಿದ್ದರೂ ಕೆಲವುವೇಳೆ ರಾಷ್ಟ್ರಕಂಟಕವಾಗಿಯೂ ಇರುತ್ತವೆ. ಹೀಗೆ ಒಂದೇ ಪಕ್ಷದ ಸರಕಾರವಿದ್ದರೆ ಅದರಿಂದ ಹೆಚ್ಚು ಅನಾನುಕೂಲಗಳಾಗುತ್ತವೆ.

ಎರಡನೆಯದು Fraternity ಎಂದರೆ ನಾವೆಲ್ಲರೂ ಅಣ್ಣತಮ್ಮಂದಿರಾಗಿ ಬಾಳಿಕೊಂಡು ಹೋಗಬೇಕೆನ್ನುವುದು.

[SRI M. SRINIVASULU NAIK (Chairman) in the Chair.]

ಆಳುವ ಪಕ್ಷದಲ್ಲಿ ಸರಕಾರ ಒಂದು ವ್ಯಕ್ತವಾದರೆ ಅದರ ಸದಸ್ಯರುಗಳೇ ಬೇರುಗಳು ಮತ್ತು ಮರಿಬೇರುಗಳು. ಹೀಗೆ ಪ್ರತಿಯೊಂದೂ ಬೆಳೆದುಕೊಂಡು ಪಟ್ಟಣಗಳಲ್ಲಿ ಗ್ರಾಮಗಳಲ್ಲಿ ಹಾಗೂ ಪ್ರತಿಯೊಂದು ಮನೆಯಲ್ಲಿಯೂ ದ್ವೇಷಾಸೂಯೆಗಳು ಬೇರೂರಿವೆ. ಇದಕ್ಕೆ ಕಾರಣ ಅವರವರ ಮನಸ್ಸಿನಲ್ಲಿ ಬೇರೂರಿರುವ ಮನೋಭಾವನೆಗಳು. ಸಾಮಾನ್ಯ ಮನುಷ್ಯನ ಒಂದು ಉದಾಹರಣೆ ಯನ್ನು ತೆಗೆದುಕೊಂಡರೆ ಅದರಲ್ಲಿ ಮೂರು ಜಾತಿಯಿರುತ್ತವೆ. ಒಂದು ಮನೆಯಲ್ಲಿ ಒಬ್ಬರು ಆಳುವ ಪಕ್ಷದ ಕಾಂಗ್ರೆಸ್ಸಿಗೆ ಸೇರಿರುತ್ತಾರೆ. ಇನ್ನೊಬ್ಬರು ಆಳುವ ಕಾಂಗ್ರೆಸ್ಸಿನ ಪಕ್ಷವಲ್ಲದ ಪಿ.ಎಸ್.ಪಿ. ಸದಸ್ಯರಾಗಿರುತ್ತಾರೆ. ಇನ್ನೊಬ್ಬರು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದವರಾಗಿರುತ್ತಾರೆ. ಹೀಗೆ ಒಂದೇ ಮನೆಯೊಳಗೆ ಮೂರು ತರಹದ ಜನರಿರುತ್ತಾರೆ. ಅವರೇನೋ ಒಂದು ರಕ್ತ ಸಂಬಂಧದಿಂದ ಒಂದುಗೂಡಿದ್ದರೂ ಅವರ ಮನಸ್ಸಿನಲ್ಲಿ ಒಂದೇ ತರಹದ ಭಾವನೆ ಬರುವುದಿಲ್ಲ. ಇಲ್ಲಿ ಭ್ರಾತೃತ್ವವನ್ನು ಕಾಪಾಡುವುದು ಎಂದರೆ ಅದು ದೇಶಕ್ಕೆ ಕಂಟಕಪ್ರಾಯವಾಗುತ್ತದೆ. ಇದಕ್ಕೆ ಬದಲಾಗಿ ಸಾಮಾನ್ಯವಾದ ಎಲ್ಲ ಪಾರ್ಟಿಯ ಸರಕಾರವಿದ್ದರೆ ಅದರೊಳಗೂ ಒಂದೇ ಭಾವನೆ ಇರುವುದಕ್ಕಾಗುವುದಿಲ್ಲ. ಮುಂದೆ ಕೂಡ ಇಂತಹ ಗಲಾಟೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದರಂತೆ Fraternity ಸರಕಾರದಲ್ಲಲ್ಲ ಎಂದು ಇಲ್ಲಿ ಹೇಳುತ್ತೇನೆ.

ಇನ್ನು Equality of Principle ಎನ್ನುವುದನ್ನು ತೆಗೆದುಕೊಂಡರೆ ಈ ಸರಕಾರದಲ್ಲಿ ಬೇರೆ ಬೇರೆ ವಿಧಾನಗಳನ್ನನುಭವಿಸುತ್ತಿರುವುದರಿಂದ ಈ ದೇಶದ ಆಳುವ ಪಕ್ಷದವರು ನಿಷ್ಪಕ್ಷಪಾತವಾಗಿರಲು ಸಾಧ್ಯವೇ? ನ್ಯಾಯ, ಸತ್ಯ, ಧರ್ಮ ಮಾರ್ಗಗಳನ್ನನುಸರಿಸಲು ಪ್ರತಿಯೊಬ್ಬರಿಗೂ ಅವ ಕಾಶಮಾಡಿಕೊಡುತ್ತಿದ್ದಾರೆಯೇ ಎಂದು ನೋಡಿದರೆ ಅವರು ಆ ತರಹ ಮಾಡುತ್ತಿಲ್ಲ ಎಂದು ಕಾಣುತ್ತಿದೆ. ವಿರೋಧಪಕ್ಷದವರ ದೃಷ್ಟಿಯಿಂದ ನೋಡಿದರೆ Equality of Principle ವಿಷಯದಲ್ಲಿ ಅವರು ಹೇಳುವಷ್ಟರಮಟ್ಟಿಗೆ ವಿಷಯಗಳು ನಡೆಯುತ್ತಿವೆಯೇ ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ತಾವು ಅನೇಕ ದೃಷ್ಟಿಗಳಿಂದ, ಪಕ್ಷ ಕಟ್ಟುವ ದೃಷ್ಟಿಯಿಂದ ತಮ್ಮ ಪಕ್ಷಕ್ಕೆ ಬೆಂಬಲವನ್ನು ಚುನಾವಣೆಯ ಕಾಲದಲ್ಲಿ ಗಳಿಸುವ ಉದ್ದೇಶದಿಂದ ತಾವು ಹೋಗುವ ದಾರಿಯನ್ನು ಬಿಟ್ಟು ಹೋಗಲೇಬೇಕಾಗುತ್ತದೆ. ಅದರಂತೆ ಅನುಕೂಲ ಮಾಡಲೇಬೇಕಾಗುತ್ತದೆ. Equality of Principles ಎನ್ನುವುದು ಬರಿಯ ಒಂದು ದೊಡ್ಡ ಗಲಾಟೆ; ಪ್ರಜಾಪ್ರಭುತ್ವದಲ್ಲಿ, ರಾಜಕೀಯದ ವಿಷಯದಲ್ಲಿ ಒಂದು ಪಕ್ಷದ ಸರಕಾರವಿದ್ದರೆ ಇಲ್ಲದ ಗೊಂದಲಗಳಿಗೆ ಕಾರಣವಾಗುತ್ತದೆ. ಎಲ್ಲ ಪಕ್ಷದ ಸರಕಾರ ಇದ್ದರೆ ಇದಕ್ಕೆಲ್ಲಾ ಅವಕಾಶವಾಗುವುದಿಲ್ಲ. ನಮ್ಮ ಇಂಡಿಯಾ ದೇಶದಲ್ಲಿ ಒಂದೇ ಪಕ್ಷದ ಸರಕಾರ ಇರುತ್ತದೆ. ಒಂದೇ ಪಕ್ಷದ ಸರಕಾರವಿರುವುದರಿಂದ ಸಾಮಾನ್ಯವಾಗಿ ದೇಶದಲ್ಲಿ ರತಕ್ಕ ವಿದ್ಯಾವಂತರು, ಮೇಧಾವಿಗಳು, ದಕ್ಷರು, ಇವರುಗಳೆಲ್ಲಾ ತಂತಮ್ಮ ಸ್ಥಾನಮಾನಗಳನ್ನು ಒಂದೇಮಟ್ಟದಲ್ಲಿ ಇಟ್ಟುಕೊಳ್ಳಲು ಆಳುವ ಪಕ್ಷದವರು ಬೆಂಬಲ ಕೊಡಬೇಕೆಂಬುದು ಆವಶ್ಯಕ. ಹಾಗಿಲ್ಲದಿದ್ದರೆ ಅವರ ಸ್ಥಾನಮಾನಗಳನ್ನುಳಿಸಿಕೊಳ್ಳುವುದಕ್ಕೆ ಸಾಧ್ಯವಾಗುವು ಲ್ಲ ಆದರಿಂದ ಅವರುಗಳು ಆಳುವ ಪಕ್ಷವನ್ನೇ ಅನುಸರಿಸಿಕೊಂಡು ಅವರ ಸ್ಥಾನಮಾನಗಳನ್ನುಳಿಸಿಕೊಂಡು ಹೋಗ ಬೇಕಾಗಿದೆ. ಆಳುವ ಪಕ್ಷಕ್ಕೆ ಪ್ರತ್ಯಕ್ಷವಾಗಿಲ್ಲದಿದ್ದರೂ ಪರೋಕ್ಷವಾಗಿ ಅವರುಗಳು ಬೆಂಬಲ ಕೊಡಬೇಕಾಗುತ್ತದೆ. ಅವರ ತಮ್ಮ, ಮನ, ಧನಗಳನ್ನೂ ಆಳುವ ಒಂದೇ ಪಕ್ಷಕ್ಕೇ ವಿನಿಯೋಗ ವಾಗುತ್ತಿರುವುದರಿಂದ ದೇಶದ ಹಿತಕ್ಕೆ ಒಂದು ತರಹದ ಹ್ಯಾಂಡೀ ಕ್ಯಾಪ್ ಆಗುತ್ತದೆ ಹಾಗೆ ಆಳುವ ಪಕ್ಷವನ್ನೇ ಬೆಳೆಸಿಕೊಂಡು ಹೋಗಿಬಿಟ್ಟರೆ ದೇಶದ ಬಹುಭಾಗ ಜನ ಇತರ ಪಕ್ಷಗಳಿಂದ ಬರುವುದು ಕಡಮೆಯಾಗುತ್ತದೆ. ನಾನು ಹೇಳುವುದೇನೆಂದರೆ ಬಾಹ್ಯಪ್ರಪಂಚದ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದಕ್ಕಿಂತಲೂ ಒಂದು ತತ್ವ ಬಹಳ ಮುಖ್ಯವಾದುದು. ಅಂತಹ ಶಾಶ್ವತವಾದ ಆಳವಾದ ತತ್ವ ಉಳಿಯುವುದೇ ಎನ್ನುವುದನ್ನು ಸ್ವಲ್ಪ ಆಲೋಚನೆಮಾಡಿ, ವಿದ್ಯಾವಂತರು ಮೇಧಾವಿಗಳಾಗಿರುವವರು ವಿರೋಧಪಕ್ಷದಲ್ಲಿದ್ದರೂ ಅಂತಹವರಿಗೆ ಅವಕಾಶ ಕೊಟ್ಟರೆ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ನಮ್ಮ ದೇಶ ಅಷ್ಟು ಮುಟ್ಟಿನಲುನ್ನತ ಮಟ್ಟಕ್ಕೇರಲು ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಆಳುವ ಪಕ್ಷ ವಿರೋಧಪಕ್ಷವನ್ನು ಒಂದು ತರಹದ ಕಡೆಗಣ್ಣಿನಿಂದ ನೋಡುವ ಪರಿಸ್ಥಿತಿ ಒದಗಿದೆ. ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ಆಳುವ ಪಕ್ಷದವರು ವಿರೋಧಪಕ್ಷವನ್ನು ಯಾವ ರೀತಿ ನೋಡುತ್ತಾರೆನ್ನುವುದಕ್ಕೆ ಮೊನ್ನೆ ನಮ್ಮ ಹಾಸನ ಜಿಲ್ಲೆಯಲ್ಲಿ ಒಂದೇಪಾರ್ಟಿಗೆ ಸೇರಿರುವವರು ಒಂದು ರೆಸಲೂಷನ್ನನ್ನು ಮಾಡಿಕೊಂಡು ಸರಕಾರದ ಬಳಿಗೆ ಬಂದಿದ್ದರು. ಅವರು ಈ ಸಂಗತಿಯನ್ನು ಪ್ರತಿಬಿಂಬಿಸಿದ್ದಾರೆ ಎಂಬುದಾದರೂ ನಮ್ಮ ಡಿಸ್ಟ್ರಿಕ್ಟಿನಲ್ಲಿರುವ ಆಳುವ ಪಕ್ಷದ ಜನರು ಮಂತ್ರಿಗಳನ್ನು ಕಂಡ ಅವರೂ ಸಹಾನುಭೂತಿಯಿಂದ ಉತ್ತರ ಕೊಟ್ಟರು ಎಂಬುದಾಗಿಯೂ ಪೇಪರುಗಳಲ್ಲಿ ಹಾಕಿಸಿದ್ದಾರೆ. ಲೆಜಿಸ್ಲೇಟರುಗಳು ಹೇಳುವುದು ಮಾಮೂಲಾಗಿರುತ್ತದೆ ಎಂದು ಹೀಗೆ ಒಂದು ರೆಸಲ್ಯೂಷನ್ನನ್ನು ಮಾಡಿಕೊಂಡು ಇಲ್ಲಿಗೆ ಬಂದು ಅದನ್ನು ಪಿ. ಡಬ್ಲ್ಯೂ. ಡಿ. ಮತ್ತು ರೆವಿನ್ಯೂ ಮಂತ್ರಿಗಳಿಗೆ ಕೊಟ್ಟು ಈಗ ಕೊಚ್ಚಿರುವ ಗ್ರಾಂಟು ಕಡಮೆ; ಅದಕ್ಕೆ ಪಿ. ಡಬ್ಲ್ಯೂ. ಡಿ. ಶಾಖೆಯಿಂದ ಹೆಚ್ಚು ಕೊಡಲು ಪ್ರಯತ್ನ ಮಾಡಿ ಎಂದು ಅಲ್ಲಿಂದ ಡೆಪ್ಯುಟೇಷನ್ನು ಕಂದಿದ್ದರು. ಅಲ್ಲಿ ಬೇರೆ ಪಕ್ಷದ ಲೆಜಿಸ್ಲೇಟರುಗಳು ಇದ್ದಾರೆ. ಅವರಿಗೆ ತಿಳಿಸದೇ ತಮ್ಮ ಪಕ್ಷದ ಜನರು ಬಂದಿದ್ದರು ಎಂದು ಅದನ್ನು ಈಚೆಗೆ ದೊಡ್ಡದಾಗಿ ಪೇಪರುಗಳಲ್ಲಿ ಹಾಕಿಸಿದ್ದಾರೆ. ಇದರ ಪರಿಣಾಮ ಏನು ಎನ್ನುವುದನ್ನು ಆಲೋಚನೆ ಮಾಡಬೇಕು. ಅವರ ಮನೋಭಾವನೆ ಎರೆಕ್ಷನ್ನಿನ ದೃಷ್ಟಿಯನ್ನಿಟ್ಟುಕೊಂಡು ಆಳುವ ಪಕ್ಷಕ್ಕೆ ಬೆಂಬಲ ಪಡೆಯುವುದಕ್ಕಾಗಿ ಈ ರೀತಿ ಮಾಡುವುದು ನ್ಯಾಯವೇ? ಈ ರೀತಿ ಸರಕಾರದ ಒಂದು ತಾತ್ಸಾರ ಭಾವದಿಂದ ನಡೆಯುತ್ತದಾದರೆ ಇದರಿಂದ ಪ್ರಜಾಪ್ರಭುತ್ವ ತತ್ವ ಉಳಿಯುತ್ತದೆಯೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕು. ಆಳುವ ಪಕ್ಷ ಮತ್ತು ವಿರೋಧಪಕ್ಷದವರನ್ನು ಸರಿಸಮಾನವಾಗಿ ಕಾಣುತ್ತಾರೆ ಎಂದು ಕೆಲವರು ಹೇಳಬಹುದು. ಭಿನ್ನ ಭಾವ ಭೇದ ಭಾವವನ್ನು ಈ ದೇಶದೊಳಗೆ ಉಂಟು ಮಾಡಿದರೆ ಅದು ಒಳ್ಳೆಯದೇ ಎನ್ನುವುದನ್ನೂ ತಾವು ಆಲೋಚನೆ ಮಾಡಬೇಕು. ಮತ್ತು ಒಂದೇ ಪಕ್ಷದ ಸರಕಾರವಿದ್ದರೆ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಆಳುವ ಪಕ್ಷದ ದೃಷ್ಟಿಕೋನವನ್ನೇ ನೋಡುತ್ತೇವೆ. ಅದೇ ದೃಷ್ಟಿಯುಳ್ಳ ಅವರ ಬಂಧುಗಳಿಗೇ, ಅವರ ವಿಶ್ವಾಸಪಾತ್ರರಾದವರಿಗೆ, ಅವರ ಸ್ನೇಹಿತರಿಗೆ ಎಲ್ಲಾ ಅನುಕೂಲಗಳನ್ನೂ ಜಾಸ್ತಿಯಾಗಿ ಕೊಡುತ್ತಿದ್ದಾರೆ. ದೇಶದ ಸಂಪತ್ತೆಲ್ಲವೂ ಅವರ ಅನುಕೂಲಕ್ಕಾಗಿದೆ ಎನ್ನುವುದೇ ಇದರಿಂದ ಭಾಸವಾಗುತ್ತದೆ. ಆ ರೀತಿಯಾದ ಆಳುವ ಪಕ್ಷವಿಲ್ಲದೇ ಬೇರೆ ಪಕ್ಷಗಳ ಸರಕಾರವಿದ್ದರೆ ಇಂತಹ ಭಿನ್ನಭಾವನೆಗೆ ಅಥವಾ ಭೇದಭಾವಕ್ಕೆ ಅವಕಾಶವಿರುವುದಿಲ್ಲ.

ಒಂದು ಸರ್ವತೋಮುಖವಾದ ಅಭಿವೃದ್ಧಿ ದೇಶದಲ್ಲೆಲ್ಲಾ ಉಂಟಾಗಿ, ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸುಖವನ್ನು ಅನುಭವಿಸುವುದಕ್ಕೆ ಒಂದು ಅವಕಾಶವಾಗುತ್ತದೆ. ದೇಶದಲ್ಲಿ ಪಕ್ಷಾತೀತ ರಾಜ್ಯವಿದ್ದರೆ ಆಳುವ ಪಕ್ಷದ ಒಂದು ಗುಂಪು, ವಿರೋಧ ಪಕ್ಷದ ಒಂದು ಗುಂಪು ಎಂದಿರದೆ, ಒಂದು ಪಕ್ಷದವರು ಇನ್ನೊಂದು ಪಕ್ಷದಲ್ಲಿ ಸಂದೇಹ ಪಡುವುದಿಲ್ಲ. ಈಗ ಚೀನಾ ದೇಶದವರು ನಮ್ಮ ದೇಶದ ಮೇಲೆ ಧಾಳಿ ಮಾಡಿದ್ದಾರೆ. ಇಂಥ ಸಮಯದಲ್ಲಿ ನಾವು ದೇಶಕ್ಕೆ ಎಲ್ಲ ವಿಧವಾದಂಥ ಸಹಾಯವನ್ನೂ ಕೊಡಬೇಕು—ತನುಮನಧನದಲ್ಲಿ. ಶರೀರವನ್ನು ಅರ್ಪಿಸಬೇಕು, ಸಿಪಾಯಿಗಳನ್ನು ಒದಗಿಸಬೇಕು, ದುಡ್ಡು ಕೊಡಬೇಕು. ಇದರ ಜೊತೆಗೆ ಈ ದೇಶಕ್ಕೆ ಜಯವನ್ನು ಗಳಿಸಿಕೊಡು ಎಂದು ಯಾವಾಗಲೂ ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ಕಾಲ ಕಳೆಯಬೇಕು. ಇಂಥ ಒಂದು ಕಾಲದಲ್ಲಿ ಒಂದೇ ಪಕ್ಷದ ಸರ್ಕಾರವಿದ್ದರೆ, ದೇಶವನ್ನು ಸಂರಕ್ಷಿಸುವ ಜವಾಬ್ದಾರಿ ಸರಕಾರದ್ದು, ಅವರೇ ಬೇಕಾದರೆ ದೇಶ ಉಳಿಸಲಿ ಎಂದು ವಿರೋಧ ಪಕ್ಷದವರು ಒಂದು ತಾತ್ಸಾರ ಮನೋಭಾವವನ್ನು ದೇಶದ ರಕ್ಷಣೆ ಬಗ್ಗೆ ತೋರಿಸುವ ಅವಕಾಶವಿದೆ. ಆದರೆ ಹಾಗೆ ತೋರಿಸುತ್ತಾ ಇಲ್ಲ. ಅದೂ ಅಲ್ಲದೆ ಇನ್ನು ಕೆಲವು ಪಕ್ಷದವರು ಶತ್ರುಗಳೊಂದಿಗೆ ಸೇರಿಕೊಂಡು, ರಾಷ್ಟ್ರೀಯ ರಕ್ಷಣೆಗೆ ಧಕ್ಕೆ ತರತಕ್ಕಂಥದ್ದು ತಮ್ಮ ಪಕ್ಷದ ಕರ್ತವ್ಯ ಎಂದು ತಿಳಿದುಕೊಂಡು, ದೇಶ ರಕ್ಷಣೆಯನ್ನು ಕುಂಠಿತಗೊಳಿಸುವುದಕ್ಕೆ ಅವಕಾಶವಿರುತ್ತದೆ. ಯುದ್ಧಸಮಯದಲ್ಲಿ ಬೇಕಾದಷ್ಟು ದುಡ್ಡು ಬೇಕಾಗಿರುತ್ತದೆ. ಸರ್ವಿಶ್ ಸರಕಾರವಿದ್ದರೆ, ವಿರೋಧ ಪಕ್ಷದವರು, ಆಳುವ ಪಕ್ಷದವರು ಎಲ್ಲರೂ ಯಾವ ಭಿನ್ನಭಾವನೆಯೂ ಇಲ್ಲದೆ ಸೇರಿಕೊಂಡು ಒಂದು ದೊಡ್ಡ ಗಂಟನ್ನು ಶೇಖರಿಸುತ್ತಾರೆ. ಇಲ್ಲದಿದ್ದರೆ ಆಳುವ ಪಕ್ಷಕ್ಕೆ ತನ್ನ ದೊಡ್ಡಸ್ತಿಕೆಯನ್ನೂ ಪ್ರತಿಷ್ಠೆಯನ್ನೂ ತೋರಿಸುವುದಕ್ಕೆ, ವಿರೋಧ ಪಕ್ಷವನ್ನು ಬಿಟ್ಟು, ತಾನೇತಾನು ಹಣವನ್ನು ಶೇಖರಿಸುವುದಕ್ಕೆ ಹೊರಡುತ್ತದೆ. ವಿರೋಧ ಪಕ್ಷದವರ ಹಂಗೇನು ಆಳುವ ಪಕ್ಷ ಉಳಿದುಕೊಂಡು ಬಿಡಬಹುದು, ವಿರೋಧ ಪಕ್ಷವನ್ನು ಕಡೆಗಣ್ಣಿನಿಂದ ನೋಡಿದರೆ ಅದೂ ಜವಾಬ್ದಾರಿ ಹಂಚಿಕೊಳ್ಳಲು ಸಾಧ್ಯವಾಗದಿರಬಹುದು. ಈ ತರಹ ಆಳುವ ಪಕ್ಷ ವಿರೋಧ ಪಕ್ಷಗಳಲ್ಲಿ ಒಗ್ಗಟ್ಟಿಲ್ಲದೆ ಒಂದೊಂದು ಕಡೆ ಎಳೆದರೆ, ಹೊರಗಡೆ ಕಾದಿರ

ತಕ್ಕಂಥ ಶಕ್ತಿಯನ್ನು ಎದುರಿಸುವುದಕ್ಕೆ ಬೇಕಾದ ತಕ್ಕ ಸಾಮರ್ಥ್ಯ ತೋರಿಸುವ ಮನೋಭಾವ ಉಂಟಾಗುವುದಿಲ್ಲ. ಆದರೆ ಪಕ್ಷೇತರ ಸರಕಾರವಿದ್ದರೆ ಪ್ರತಿಯೊಬ್ಬ ಪ್ರಜೆಯೂ ತನ್ನ ಕರ್ತವ್ಯ ನಿರ್ವಹಣೆಯನ್ನು ಬಹಳ ಎಚ್ಚರಿಕೆಯಿಂದ ಮಾಡುತ್ತಾನೆ. ಆಗ ದೇಶಕ್ಕೆ ಕಲ್ಯಾಣವುಂಟಾಗುತ್ತದೆ. ಪ್ರತಿಯೊಬ್ಬ ಪ್ರಜೆಯೂ ತನ್ನ ಜವಾಬ್ದಾರಿಯನ್ನು ಅರಿತುಕೊಂಡು, ದೇಶಕ್ಕೆ ತನ್ನ ಪ್ರಾಣವನ್ನಾದರೂ ತೆತ್ತುಬಿಟ್ಟು, ಆದಷ್ಟು ಬೇಗ ದೇಶ ಕಳೆದುಕೊಂಡಿರುವ ಭೂಮಿಯನ್ನು ಶತ್ರುವಿನಿಂದ ಕಿತ್ತುಕೊಂಡು, ತನ್ನ ಆತ್ಮವನ್ನು ಚಿರಸ್ಥಾಯಿಯಾಗಿ ಉಳಿಸಿಕೊಳ್ಳುತ್ತಾನೆ. ಸಮ್ಮಿಶ್ರ ಸರಕಾರವಿದ್ದರೆ ಪ್ರತಿಯೊಬ್ಬ ಪ್ರಜೆಗೂ ತನ್ನ ಕರ್ತವ್ಯ ಮಾಡುವುದಕ್ಕೆ, ತನ್ನ ಜವಾಬ್ದಾರಿಯನ್ನು ಹೊತ್ತು ಕೆಲಸ ಮಾಡುವುದಕ್ಕೆ ಸದವಕಾಶವಿರುತ್ತದೆ. ಒಂದು ಪಕ್ಷಕ್ಕೆ ಇನ್ನೊಂದು ಪಕ್ಷಕ್ಕೆ ಐಕ್ಯತೆಯ ಬಗ್ಗೆ ವಿರೋಧ ಬಂದರೆ, ಜವಾಬ್ದಾರಿ ಕಳಚಿಬಿಟ್ಟು, ಅಕಸ್ಮಾತ್ತಾಗಿ ಒಬ್ಬರು ಇನ್ನೊಬ್ಬರನ್ನು ವಿರೋಧಿಸಿಬಿಟ್ಟು, ದೇಶಕಂಟಕ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ.

ಅಮೇರಿಕ ದೇಶದ ಕಾನ್‌ಸ್ಟಿಟ್ಯೂಷನ್‌ನ್ನು ತೆಗೆದುಕೊಂಡರೆ, ಅಲ್ಲಿಯ ಅಧ್ಯಕ್ಷರು ಚುನಾಯಿತರಾದಮೇಲೆ ಅವರ ಪಾರ್ಟಿಗೆ ಕಾಂಗ್ರೆಸ್ಸಿನಲ್ಲಿ ಬಹುಮತವಿಲ್ಲದಿದ್ದರೂ, ಸರಕಾರವನ್ನು ರಚನೆ ಮಾಡಿ, ಸುವ್ಯವಸ್ಥಿತವಾಗಿ ನಡೆಸುವ ಅವಕಾಶವಿದೆ. ನಮ್ಮ ದೇಶದಲ್ಲಿ ಆ ಅವಕಾಶವಿಲ್ಲ. ಇಲ್ಲಿ ಸಭೆಯ ನಾಯಕರನ್ನು ತೆಗೆದುಕೊಂಡರೆ ಅವರು ಆಳುವ ಪಕ್ಷದವರ ದೃಷ್ಟಿಯಿಂದ ಒಂದು ದೃಷ್ಟಿಯಲ್ಲಿ ಕಾಣುತ್ತಿರುತ್ತಾರೆ, ವಿರೋಧ ಪಕ್ಷದ ದೃಷ್ಟಿಯಿಂದ ಒಂದು ದೃಷ್ಟಿಯಲ್ಲಿ ಕಾಣುತ್ತಾ ಇರುತ್ತಾರೆ. ಇಂಥ ಒಂದು ದೊಡ್ಡ ದೇಶಕ್ಕೆ ಒಬ್ಬರ ಯಜಮಾನಿಕೆ ಇರಬೇಕು. ಆ ಯಜಮಾನಿಕೆಯನ್ನು ವಹಿಸಬೇಕಾದರೆ ದೃಷ್ಟಿಕೋಣ ಒಂದೇ ಇರಬೇಕು. ಒಂದು ಕಂಬದಲ್ಲಿ ಬೇಕಾದಷ್ಟು ಬತ್ತಿಗಳಿದ್ದು, ಕಂಬಕ್ಕೆ ಎಣ್ಣೆ ಹಾಕಿದಾಗ, ಆ ಬತ್ತಿಗಳಿಂದ ಒಂದೇ ಉರಿ ಕಾಣುತ್ತದೆ. ಅದೇ ತರಹ ಮಿಶ್ರ ಸರಕಾರ ಪ್ರಜ್ವಲವಾಗಿ ಶೋಭಿಸಿ ಹೆಚ್ಚು ಬೆಳಕನ್ನು ಕೊಡುವ ಒಂದು ದೀಪಿಗೆಯಾಗಿರುತ್ತದೆ. ದೇಶವನ್ನು ಆಳತಕ್ಕ ಲೀಡರ್ ಪ್ರಜಾಸಮುದಾಯದಿಂದ ಚುನಾಯಿತರಾದವರಾಗಿರಬೇಕು. ಅಂಥ ನಾಯಕರನ್ನು ಆರಿಸಿಕೊಂಡು, ಸರಕಾರ ರಚಿಸಿದರೆ, ಆ ಸರಕಾರ ದೇಶಕ್ಕೆ ಕಿರೀಟಪ್ರಾಯವಾಗಿರುತ್ತದೆ. ಆಗ ದೇಶದಲ್ಲಿ ಭಿನ್ನಭಾವನೆಗಳು ಹೋಗಿಬಿಟ್ಟು, ಪ್ರತಿಯೊಬ್ಬ ಪ್ರಜೆಗೂ ಒಗ್ಗಟ್ಟಿನಿಂದ ದೇಶಕ್ಕೆ ಹಗಲಿರಳೂ ದುಡಿಯತಕ್ಕಂಥ ಉತ್ಸಾಹ ಬರುತ್ತದೆ. ಮತ್ತು ಬಹಳ ಬೇಗನೆ ದೇಶ ಆರ್ಥಿಕವಾಗಿ, ಸಾಮಾಜಿಕವಾಗಿ, ಅಭಿವೃದ್ಧಿಗೆ ಬರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಪುನರುಕ್ತಿಯಾದರೂ ನಾನು ಹೇಳುವುದೇನೆಂದರೆ ಈ ದೇಶದಲ್ಲಿ ಲೀಡರ್ ಆಫ್ ದಿ ಹೌಸ್ ನೇರವಾಗಿ ಪ್ರಜಾಸಮುದಾಯದಿಂದ ಚುನಾಯಿತನಾದ ಒಬ್ಬ ಲೀಡರ್ ಇರಬೇಕು. ಈ ಲೀಡರಿಗೆ ಅವನು ಸೇರಿರುವ ಪಕ್ಷದ ಸಂಪರ್ಕವಿರಬಾರದು. ಲೀಡರು ಮಂತ್ರಿ ಮಂಡಲದಲ್ಲಿ ಆಯಾ ಪಕ್ಷದ ಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯವನ್ನು ಕೊಡಬೇಕು. ಹೀಗೆ ಆಳುವ ಪಕ್ಷದವರು ಸರಕಾರವನ್ನು ಕಟ್ಟಿ ಆಳಿದರೆ, ಎದುರು ಪಕ್ಷದವರನ್ನು ಅವರ ಬುಟ್ಟಿಗೆ ಹಾಕಿಕೊಂಡಾಗುತ್ತದೆ. ಆಗ ಆಳುವ ಪಕ್ಷಕ್ಕೂ ಎದುರು ಪಕ್ಷಕ್ಕೂ ಇರುವ ವ್ಯತ್ಯಾಸಗಳು ಕಡಿಮೆಯಾಗುತ್ತವೆ. The differences will sink. ಎದುರು ಪಕ್ಷದವರೂ ಆಡಳಿತ ಪಕ್ಷದವರೂ ನೋಡುತ್ತಾ ಇರತಕ್ಕಂಥ ದೃಷ್ಟಿಕೋಣ ಬದಲಾವಣೆಯಾಗಿ, ಎರಡು ಪಕ್ಷದವರೂ ಭುಜಕ್ಕೆ ಭುಜ ಕೊಟ್ಟು ಕೆಲಸ ಮಾಡಿ, ಲೀಡರಿಗೆ ಒಳ್ಳೆಯ ಹೆಸರು ಬರುತ್ತದೆ, ಸರಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಅದೂ ಅಲ್ಲದೆ ಎರಡೂ ಪಕ್ಷಗಳಿಗೆ ಒಳ್ಳೆಯ ಹೆಸರು ಬಂದು, ದೇಶ ಸರ್ವತೋಮುಖವಾದ ಅಭಿವೃದ್ಧಿ ಹೊಂದಲು ಸಹಾಯಕವಾಗುತ್ತದೆ. ಇಷ್ಟು ಹೇಳಿ, ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದ ನಮ್ಮ ಸೋದರರಾದ ಶ್ರೀ ವೀರಭದ್ರಪ್ಪ ಈರಪ್ಪನವರು ಏಕಪಕ್ಷೀಯ ಸರಕಾರವನ್ನು ಒದಲಾಯಿಸಿ ಪಕ್ಷಾತೀತವಾದ ರಾಜ್ಯವನ್ನು ಸ್ಥಾಪಿಸಬೇಕೆಂದು ತಂದಿರುವ ನಿರ್ಣಯವನ್ನು ವಿರೋಧಿಸುತ್ತಾ, ತಮ್ಮ ಮೂಲಕ ಎರಡು ವಿಚಾರಗಳನ್ನು ಅವರ ಗಮನಕ್ಕೆ ತರಬೇಕೆಂದಿದ್ದೇನೆ.

ಮಾನ್ಯ ಸೋದರರು ಮಾತನಾಡುತ್ತಾ ಮಿಶ್ರ ಸರಕಾರವಿದ್ದರೆ ಸಾಮಾಜಿಕ, ಆರ್ಥಿಕ ದೃಷ್ಟಿಯಿಂದ ಬಹಳ ಒಳ್ಳೆಯ ದೃಷ್ಟಿಕೋಣ ಬರಲು ಅನುಕೂಲವಾಗುತ್ತದೆ, ಅದೇ ಒಂದು ಏಕ ಪಕ್ಷೀಯ ಸರಕಾರ ಇದ್ದರೆ ಆ ದೃಷ್ಟಿಕೋಣ ಬದಲಾವಣೆಯಾಗುತ್ತದೆ ಎಂದು ಹೀಗೆ ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತಂದರು. ಆದರೆ ನಾನಾದರೂ ಹೇಳುತ್ತೇನೆ, ಸೂರ್ಯ ಪೂರ್ವದಿಕ್ಕಿನಲ್ಲೆ ಹುಟ್ಟುವುದು ಎಷ್ಟು ಸಿದ್ಧಾಂತವೊ, ಪ್ರಜಾ ಸತ್ತೆಯಲ್ಲಿ ಏಕಪಕ್ಷೀಯ ಆಡಳಿತ ಇರಲೇಬೇಕೆಂಬುದು ಅಷ್ಟೇ ಸಿದ್ಧಾಂತ. ಇಂಗ್ಲೆಂಡ್, ಅಮೇರಿಕ ಮೊದಲಾದಂಥ ಪ್ರಜಾ ಪ್ರಭುತ್ವ ರಾಷ್ಟ್ರಗಳು ಏಕ ಪಕ್ಷೀಯ ಆಡಳಿತದಿಂದಲೇ ಗಣ್ಯತೆ ಪಡೆದಿವೆ. ಇಲ್ಲಿ ನಮ್ಮಲ್ಲಿಯೂ ಸ್ವಾತಂತ್ರ್ಯ ಬಂದ 16 ವರ್ಷಗಳಿಂದ ಏಕಪಕ್ಷೀಯ ಆಡಳಿತ ಇರುವುದರಿಂದಲೇ ನಮ್ಮ ಸ್ವಾತಂತ್ರ್ಯ ಉಳಿದು ಬೆಳೆಯುತ್ತಿದೆ,

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ರಾಷ್ಟ್ರ ಮುನ್ನಡೆಯುತ್ತಿದೆ. ಮಿಶ್ರ ಆಡಳಿತವಿದ್ದಿದ್ದರೆ ಸ್ವಾತಂತ್ರ್ಯ ಉಳಿಯಲು ಕಷ್ಟವಾಗುತ್ತಿತ್ತು, ಧ್ಯೇಶದ ಉನ್ನತಿಗೆ ನಷ್ಟವಾಗುತ್ತಿತ್ತು ಎಂದು ಬಂಡಿತ ಹೇಳಬಹುದು. ಏಕೆಂದರೆ ಕಳೆದ ಸಾರಿ ಕೇರಳದಲ್ಲಿ ಮಿಶ್ರ ಸರಕಾರ ಯಾವರೀತಿ ಕೆಲಸ ಮಾಡಿತು ಎಂಬುದು ಎಲ್ಲಾ ಜನತೆಗೂ ತಿಳಿದಂಥ ವಿಷಯವೇ ಆಗಿದೆ. ಈ ಮಿಶ್ರ ಸರ್ಕಾರ ಯಾವಾಗ ಹೋದೀತೊ, ಒಂದು ಪಕ್ಷದ ಆಡಳಿತ ಯಾವಾಗ ಬಂದೀತೊ, ಯಾವಾಗ ನಾವು ಸುಭಿಕ್ಷೌಲಭ್ಯಗಳನ್ನು ಕಾಣುತ್ತೇವೆಯೋ ಎನ್ನುವಷ್ಟು ಕೇರಳದಲ್ಲಿ ಆಗಿಹೋಯಿತು. ಇದು ನಮ್ಮ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಯಾವ ಪಕ್ಷವೇ ಆಡಳಿತಕ್ಕೆ ಬರಲಿ, ನಮ್ಮ ಪಕ್ಷ ಆಡಳಿತದಲ್ಲಿ ಕೀರ್ತಿ ಪಡೆಯಬೇಕೆಂಬ ಒಂದು ಪ್ರಾಂಭಲ್ಯದಿಂದ, ಒಂದು ತತ್ವದಿಂದ ಆಡಳಿತ ನಡೆಸುತ್ತದೆ. ಪಕ್ಷ ಸಂಘಟಿತವಾಗಿದ್ದು, ಶಿಸ್ತು, ಒಗ್ಗಟ್ಟು, ರೀತಿ ನೀತಿಗಳಿಂದ ಕೂಡಿರುತ್ತದೆ. ಹೀಗಿರದೆ ಕಮ್ಯೂನಿಸ್ಟ್ ಒಬ್ಬರು, ಪಿ. ಎಸ್. ಪಿ. ಒಬ್ಬರು, ಸ್ವತಂತ್ರ ಒಬ್ಬರು, ಕಾಂಗ್ರೆಸ್ಸಿನವರೊಬ್ಬರು ಹೀಗೆ ನಾನಾ ತತ್ವಗಳ, ನಾನಾ ರೀತಿನೀತಿಗಳವರು ಸೇರಿ ಆಡಳಿತ ನಡೆಸಿದರೆ, ಅಲಮಟ್ಟಿ ಭಿಕ್ಷುಕರು ಅನಾಥಾಲಯ ಕಟ್ಟಿಸಿದಂತೆ ಆಗುತ್ತದೆ. ಅಲಮಟ್ಟಿಯಲ್ಲಿ ನಾಲ್ಕು ಜನ ಭಿಕ್ಷುಕರಿದ್ದರು, ಒಬ್ಬ ಜಂಗಮಯ್ಯ, ಒಬ್ಬ ಹಾರವಯ್ಯ, ಒಬ್ಬ ದಾಸಯ್ಯ, ಒಬ್ಬ ಫಕೀರ್ ಸಾಬ್ ಹೀಗೆ ನಾಲ್ಕು ಜನ ನಾಲ್ಕು ತತ್ವದವರು. ಅವರಿಗೆ ಸಂಸಾರವೂ ಇರಲಿಲ್ಲ, ತಾಪಾತ್ರಯವೂ ಇರಲಿಲ್ಲ. ನಾಲ್ವರೂ ಒಂದೊಂದು ಊರಿಗೆ ಭಿಕ್ಷಾಟನೆಗೆ ಹೋಗಿ ಸಂಜೆ ಒಂದು ಧತ್ರದಲ್ಲಿ ಸೇರುತ್ತಿದ್ದರು. ನಾಲ್ವರೂ ಸೇರಿ ಧರ್ಮಾತ್ಮರಿಂದ ಹಣ ವಸೂಲು ಮಾಡಿ ಒಂದು ಅನಾಥಾಲಯ ಕಟ್ಟಿಸಬೇಕು, ನಾಳೆಯಿಂದ ಕಾರ್ಯಕ್ರಮ ಹಾಕಿಕೊಳ್ಳೋಣವೆಂದು ಚರ್ಚಿಸಿದರು. ಆಗ ಬಹುದು ಎಂದುಕೊಂಡು, ಅನಾಥಾಲಯಕ್ಕೆ ಬಂದವರಿಗೆ ದೇವರ ಪೂಜೆಗೆ ಅನುಕೂಲವಾಗುವಂತೆ ಒಂದು ಶಿವಾಲಯವಿರಬೇಕೆಂದು ಜಂಗಮಯ್ಯ ಹೇಳಿದ. ಶಿವಭಕ್ತರೇ ಬರುವುದಿಲ್ಲ, ವಿಷ್ಣುಭಕ್ತರೂ ಬರುತ್ತಾರೆ, ರಂಗನಾಥನ ಗುಡಿ ಇರಬೇಕೆಂದು ಹಾರುವಯ್ಯ ಹೇಳಿದ. ನಮ್ಮ ದೇಶದಲ್ಲಿ ವೆಂಕಟನ್ಸ್ವಾಮಿ ಒಕ್ಕಲು ಬಹಳ, ವೆಂಕಟರಮಣನ ಗುಡಿ ಇರಬೇಕೆಂದು ದಾಸಯ್ಯ ಹೇಳಿದ. ಅದಕ್ಕೆ ಫಕೀರ ಸಾಹೇಬರು ನಮ್ಮದು ನಮಾಜಿಗೆ ಒಂದು ಮಸೀದಿ ಬೇಕು, ಅವನ್ನೆಲ್ಲ ಕಟ್ಟಿಸಬೇಕು, ಎಂದು ಹೇಳಿದರು. ಹೀಗೆ ಅನಾಥಾಲಯ ಕಟ್ಟಿಸುವುದಕ್ಕೆ ಮುಂಚೆ ತಮ್ಮ ತಮ್ಮ ದೇವರುಗಳ ಬಗ್ಗೆ ಜಗಳ ಮಾಡಿದರು, ಭಿನ್ನಾಭಿಪ್ರಾಯ ಬಂತು. ಕೊನೆಗೆ ಅನಾಥಾಲಯ ಮುಗಿಸೋಣ ಆಮೇಲೆ ಬೇಕಾದರೆ ದೇವಸ್ಥಾನಗಳನ್ನು ಕಟ್ಟಿಸುವ. ಆಲೋಚನೆ ಮಾಡೋಣವೆಂದು ನಿರ್ಧಾರಕ್ಕೆ ಬಂದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಈ ಕಥೆಯನ್ನು ಬರೆದ ಕವಿ ಯಾರು, ಇದು ಯಾವಾಗ ಬರುತ್ತದೆ, ಯಾವ ಪುಸ್ತಕದಲ್ಲಿ ಬರುತ್ತದೆ.....

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನಾನೇ ಕವಿ. ಇವರ ಪಕ್ಷ ಹೇಗಿದೆ ಎಂದು ಕಥೆ ಬರೆದೆ—ನನ್ನ ಪುರಾಣದಲ್ಲಿದೆ, ನನ್ನ ಪುಸ್ತಕದಲ್ಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಪುಸ್ತಕವನ್ನು ಬೇಗ ಪಬ್ಲಿಷ್‌ಮಾಡಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ಕಥೆಗಳೆಲ್ಲ ಮುಗಿಯಲಿ, ಆ ಮೇಲೆ ಪಬ್ಲಿಷ್ ಮಾಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಬ್ಲಿಷ್ ಮಾಡಿದ ಮೇಲೆ ನಮಗೂ ಕೊಡಿ. ನಿಮ್ಮ ಕಥೆಯಲ್ಲಿ ಉಡುಪಿ ಕೃಷ್ಣನನ್ನು ಸೇರಿಸಿಲ್ಲವಲ್ಲ;

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಎಲ್ಲವನ್ನೂ ಸೇರಿಸಿದ್ದೇನೆ.

ಹೀಗೆ ಚರ್ಚೆಮಾಡಿ ಸುಮ್ಮನೆ ಗದ್ದಲ ಮಾಡುತ್ತ ಬೆಳಗ್ಗೆ ಎದ್ದು ಭಿಕ್ಷಾಟನೆಗೆ ಹೋಗುತ್ತಿದ್ದರು. ಹೀಗೆ ನಿತ್ಯವೂ ರಾತ್ರಿ ಅನಾಥಾಲಯಗಳ, ಗುಡಿಗಳ ಬಗ್ಗೆ ಚರ್ಚೆಮಾಡಿ ಮಲಗುವುದು, ಭಿಕ್ಷಾಟನೆಗೆ ಹೊರಡುವುದು, ಹೀಗಾಗಿ ಅನಾಥಾಲಯವನ್ನೂ ಕಟ್ಟಿಸಲಿಲ್ಲ, ಗುಡಿಗಳನ್ನೂ ಕಟ್ಟಲಿಲ್ಲ. ಇದರಂತೆ ಮೂರು ನಾಲ್ಕು ಪಕ್ಷಗಳು ಸೇರಿ ಮೂರು ನಾಲ್ಕು ತತ್ವಗಳನ್ನು ಹೇಳಿಕೊಂಡು ಯಾವ ತತ್ವದಂತೆಯೂ ಆಡಳಿತ ನಡೆಸಲು ಆಗದಂಥ ಒಂದು ನಿರ್ಣಯವನ್ನು ನಮ್ಮ ಸೋದರರು ತಂದಿದ್ದಾರೆ. ನಾನಾ ತತ್ವಗಳಿಂದ ಆಡಳಿತದಲ್ಲಿ ಅವ್ಯವಸ್ಥೆಯುಂಟಾಗಿ ಪ್ರಜಾಪ್ರಭುತ್ವದಲ್ಲಿ ಅರಾಜಕತೆಯುಂಟಾಗಲು ಅವಕಾಶವಾಗುತ್ತದೆ.

ಏಕಪಕ್ಷೀಯವಾದ ಆಡಳಿತ ಹೇಗಿರುತ್ತದೆಂದರೆ ''ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆಳೆಯಿತು'' ಎಂಬಂತಾಗುತ್ತದೆ. ಹೀಗಿದ್ದರೂ ನಮ್ಮ ಕಾಂಗ್ರೆಸ್ಸೇತರ ಮಿತ್ರರಿಗೆ ಹೇಗಾದರೂ ಈ ನಿರ್ಣಯವನ್ನು ತರಬೇಕು, ಏನಾದರೂ ಮಾಡಿ ಮಿಶ್ರ ಸರ್ಕಾರ ಒಂದು ರಚನೆಯಾಗಬೇಕು, ಎನ್ನುವಂಥ ಚಪಲ ಏಕೆ ಬಂತು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮೊನ್ನೆತಾನೇ ಅವಿಶ್ವಾಸ

ನಿರ್ಣಯದ ಮೂಲಕ ಆಡಳಿತ ಚಪಲ ತೋರಿಸಿ ಪರಾಜಯ ಪಡೆದಿದ್ದಾಯಿತು. ಮತ್ತೆ ಅದೇ ಒಂದು ನೆವದಲ್ಲಿ ಈ ನಿರ್ಣಯವನ್ನು ತಂದಿದ್ದಾರೆ. ಇದು ಹೇಗಿದೆ ಎಂದರೆ "ಹೋದೆಯಾ ಭೂತ ಎಂದರೆ, ಗವಾಕ್ಷಿಯಲ್ಲಿ ಬಂದೆ" ಎಂಬಂತೆ ಇದೆ. ಏಕಪಕ್ಷೀಯ ಆಡಳಿತ ಇರಬಾರದು ಎಂಬ ಈ ನಿರ್ಣಯವೂ ಸಹ ಅವಿಶ್ವಾಸ ನಿರ್ಣಯದ ಒಂದು ರೂಪಾಂತರವೇ ಇದ್ದಂತೆ ಕಾಣುತ್ತದೆ. ಇದಕ್ಕೂ ಪರಾಜಯ ವಾಗುತ್ತದೆ ಎಂಬುದು ಗೊತ್ತಿದ್ದರೂ 'ಮುಳುಗುವವನಿಗೆ ಹುಲ್ಲುಕಡ್ಡಿ ಸಿಕ್ಕಿದರೂ ಸಾಕು, ಅದನ್ನು ಹಿಡಿದುಕೊಂಡು ಮೇಲಕ್ಕೆ ಬರುತ್ತೇನೆ' ಎಂದುಕೊಳ್ಳುವಂಥ ಪರಿಸ್ಥಿತಿಯಾಗಿದೆ. ಏನೇನೋ ಕಾರಣಗಳಿಂದ ನಮ್ಮ ವಿರೋಧಿ ಪಕ್ಷದ ಮಾನ್ಯ ಸದಸ್ಯರು ಪ್ರಯತ್ನಿಸುತ್ತಿರುವುದಕ್ಕಾಗಿ ನಿಜ ವಾಗಿಯೂ ಕೂಡ ಏನೋ ಇವನ್ನು ತಂದಿದ್ದಾರೆ. ಅಯ್ಯೋ ಪಾಪ, ಎನ್ನಬೇಕಾಗಿದೆ.

ಕೊನೆಗೆ ಒಂದು ಮಾತನ್ನು ನಾನು ಅವರಿಗೆ ಹೇಳಬೇಕಾಗಿದೆ.

ಹುಟ್ಟು ಹಾಕುವ ಬಲ್ಮೆಗಳಿನದೆಯೆ ಮಿತ್ರರಿರಾ
ಬರಿದೆ ದೋಣಿಯ ನೀವು ಶಪಿಸಬೇಡ
ಆಡಳಿತ ಬಲ್ಮೆಯನು ಗಳಿಸದಲೆ ನುರಿಯದಲೆ
ಏಕ ಪಕ್ಷಾಡಳಿತ ಜರಿಯಬೇಡಿ

ಎಂದು ನಾನು ಅವರಿಗೆ ಹೇಳಬೇಕಾಗುತ್ತದೆ. ಒಂದು ಹಾವೂ ಒಂದು ಇರುವೆಯೂ ಸೇರಿ ಏಕಕಾಲಕ್ಕೆ ಒಂದು ಹುಲಿಯನ್ನು ಕಡಿದವು. ಕಡಿದ ಕೂಡಲೇ ಹುಲಿ ನತ್ತು ಹೋಯಿತು. ಹುಲಿಯನ್ನು ಕೊಂದವರು ಯಾರು ಎನ್ನುವ ಪ್ರಶ್ನೆ ಬಂದಾಗ ಇರುವೆ, ನಾಗಪ್ಪ ನಾನೂ ಸೇರಿ ಅದನ್ನು ಕಚ್ಚಿ ಕೊಂದೆವು ಎಂದು ಹೆಮ್ಮೆಯಿಂದ ಹೇಳಿತಂತೆ. ಇದರಂತೆ ದುಷ್ಟ ಶಿಕ್ಷಕ ಶಿಷ್ಟ ರಕ್ಷಣ ಗುರಿಯಾಗಿಟ್ಟುಕೊಂಡು ಆಡಳಿತಕ್ಕೆ ಬಂದಿರುವ ಕಾಂಗ್ರೆಸ್ ಪ್ರಬಲಪಕ್ಷ ಸೊಂದಿಗೆ ಸೇರಿ ನಾನೂ ಆಡಳಿತ ನಡೆಸಿದೆ ಎಂದು ಹೇಳಿಕೊಳ್ಳೋಣ ಎಂಬ ಚಪಲತೆಯಿಂದ ಈ ನಿರ್ಣಯವನ್ನು ಮಾನ್ಯ ವಿರೋಧಪಕ್ಷದ ಸೋದರರು ತಂದಿರಬೇಕೆಂದು ಯಾರಾದರೂ ಹೇಳುತ್ತಾರೆ—ಆಕಾಶಕ್ಕೆ ಏಣಿ ಹಾಕುವ ಪ್ರಯತ್ನ ಮಾಡಬೇಡಿ, ಸ್ಪುಟ್ನಿಕ್‌ನಲ್ಲಿ ಹೋಗುವ ಸಾಮರ್ಥ್ಯಗಳಿರಿ. ಶಿಸ್ತು, ಸುಸಂಘಟಿತ ಪಕ್ಷವನ್ನಾಗಿ ನಿಮ್ಮ ಪಕ್ಷವನ್ನು ಮಾಡಿ. ಒಂದು ರೀತಿನೀತಿಯಿಂದ ಹೋಗುವುದಕ್ಕೆ ಸಾಮರ್ಥ್ಯವನ್ನು ನೀವೂ ಗಳಿಸಿಕೊಳ್ಳಿರಿ. ಆಗ ನೀವೂ ಏಕಪಕ್ಷೀಯ ಸರ್ಕಾರವನ್ನು ರಚಿಸಬಹುದು ಎಂದಾದಾಗಿ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಶಿಸ್ತು ಮತ್ತು ಸಂಘಟನೆಯು ಮಾರ್ಗದಲ್ಲಿ ನಡೆದರೆ ಎಂದಿದ್ದರೂ ಇಂದಲ್ಲ ನಾಳೆ ಏಕಪಕ್ಷೀಯ ಆಡಳಿತದಿಂದಲೇ ದೇಶಕ್ಕೆ ಸುಖವೇ ಹೊರತು ವಿಶ್ರಪಕ್ಷ ಸರ್ಕಾರವಿದ್ದರೆ ನಿಜವಾಗಿಯೂ ಯಾರಿಗೂ ಸುಖ ದೊರಕುವುದಿಲ್ಲವೆಂಬುದಾಗಿ ನಾನು ಖಡಾಖಂಡಿತವಾಗಿ ಹೇಳುತ್ತಿದ್ದೇನೆ.

ಕೊನೆಯದಾಗಿ, ನಿಮ್ಮ ಸಿದ್ಧಾಂತವನ್ನು ನಾಡಿನಲ್ಲಿ ಮಂಡಿಸಿರಿ, ವಿವರಿಸಿರಿ, ಜನರೆಲ್ಲ ತಿಳಿದವನ್ನು ಸ್ವೀಕರಿಸಲಿ. ಜನವಾಣಿಯೇ ದೇವವಾಣಿಯಾದ್ದರಿಂದ ಈ ನಿರ್ಣಯದ ತೀರ್ಮಾನ ಮೊದಲು ಜನತೆಯಿಂದಾಗಬೇಕು. ಆ ರೀತಿ ಆಗುವವರೆಗೂ ಏಕಪಕ್ಷೀಯ ಆಡಳಿತವಿರಬಾರದೆಂಬ ವಿಚಾರವನ್ನು ನೀವು ನಿಮ್ಮ ಮನಸ್ಸಿನಿಂದ ತೆಗೆದುಹಾಕಿರಿ ಎಂದು ನಾನಾದರೂ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ಈ ನಿರ್ಣಯವನ್ನು ತಂದಿರುವಂಥ ಮಾನ್ಯ ವಿರೋಧಪಕ್ಷದ ಸೋದರರೇ ಪ್ರಜಾಪ್ರಭುತ್ವಕ್ಕೆ ಸಲ್ಲದಂಥ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳಿರಿ ಎಂಬುದಾಗಿ ಬಹು ವಿನಯದಿಂದ ಅವರಲ್ಲಿ ವಿನಂತಿಸಿ, ಇದನ್ನು ಹೃತ್ಪೂರ್ವಕವಾಗಿ ವಿರೋಧಿಸಿ ಒಂದೆರಡು ಮಾತುಗಳನ್ನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನಾನು ವಂದನೆಗಳನ್ನರ್ಪಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಸಭೆಯ ಮುಂದೆ ಇರತಕ್ಕ ನಿರ್ಣಯದ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿದವರ ಮಾತುಗಳನ್ನು ಕೇಳಿದ ಮೇಲೆ ಹಾಗೂ ಶ್ರೀಮತಿ ನಾಗರತ್ನಮ್ಮ ಹಿರೇಮಠ ಅವರು ಮಾತನಾಡಿದ ಮೇಲೆ ನಾನೂ ಮಾತನಾಡಬೇಕೆಂದು ಮನಸ್ಸು ಮಾಡಿದ್ದೇನೆ. ಇವರು ಯಾವಾಗ ಇಷ್ಟು ಮಾತನಾಡಿದರು, ದಾಸಯ್ಯ, ಫಕೀರ್‌ಸಾಬಿ, ಹಾರುವಯ್ಯ ಇವರನ್ನು ಕಲ್ಪನೆ ಮಾಡಿಕೊಂಡು ಒಂದು ಕಥೆ ಹೇಳಿ, ಎದುರು ಪಕ್ಷದವರಿಗೆ ಏನೇನೂ ತಿಳಿವಳಿಕೆ ಇಲ್ಲ. ಬುದ್ಧಿ ಇಲ್ಲ, ಪ್ರೇಮವಿಲ್ಲ ಎನ್ನುವ ಧಾಟಿಯಿಂದ ಮಾತನಾಡಿದರು. ನಾನಾದರೂ ಹೇಳುತ್ತೇನೆ, ಭಾರತ ಭೂಮಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ದೇಶಕ್ಕೆ ಬಂದಂಥ ರಾಜ್ಯದಲ್ಲಿ ನಡೆದಂಥ ಹೋರಾಟ ಇವುಗಳೆಲ್ಲ ಅವರ ಮನಸ್ಸಿನಲ್ಲಿಲ್ಲವೋ ಏನೋ ಎನ್ನುವ ಭ್ರಮೆ ನನಗುಂಟಾಗಿದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಕೆಲವು ಕಾಲ ಸಮ್ಮಿಶ್ರ ಸರ್ಕಾರಗಳು ಏರ್ಪಾಡಾಗಿದ್ದುದನ್ನು ಅವರು ಮರೆತಿದ್ದಾರೆಂದು ಕಾಣುತ್ತದೆ. ಹಾಗೆಯೇ ಅವುಗಳನ್ನು ತೆಗೆದುಹಾಕಿದುದನ್ನೂ ಮರೆತಿದ್ದಾರೆ ಎಂದು ಕಾಣುತ್ತದೆ. ಈ ನಿರ್ಣಯದ ಹಿನ್ನೆಲೆ ಸಮ್ಮಿಶ್ರ ಸರ್ಕಾರ ಯಾವತ್ತೂ ಇರಬೇಕೆಂದಲ್ಲ. ಇವತ್ತಿನ ತುರ್ತು ಪರಿಸ್ಥಿತಿಯಲ್ಲಿ ಸಮ್ಮಿಶ್ರ ಸರ್ಕಾರ ಬರಬೇಕು ಎಂದು ಹೇಳಿದ್ದಾರೆ. ಹಿಂದೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸ್ವಾತಂತ್ರ್ಯದ ಗಡಿಯಲ್ಲಿ ಚೀನೀಯರು ನಮ್ಮ ಮೇಲೆ ಬೀಳುತ್ತಿದ್ದಾರೆ. ಅವರನ್ನು ಹಿಮ್ಮೆಟ್ಟಿಸಲು ನಾವೂ ನೀವೂ ಎಲ್ಲ ಏಕಾಭಿಪ್ರಾಯದಿಂದ ಕೂಡಿ ಒಂದೇ ಮನಸ್ಸಿನಿಂದ ಭಾರತದ ಸ್ವಾತಂತ್ರ್ಯವನ್ನು ಸಂರಕ್ಷಣೆ ಮಾಡಬೇಕು. ಈ ಒಂದೇ ದೃಷ್ಟಿಯನ್ನು ಹಿನ್ನೆಲೆಯಾಗಟ್ಟುಕೊಂಡು ಮಾನ್ಯ ವೀರಭದ್ರಪ್ಪನವರು ಈ ನಿರ್ಣಯವನ್ನು ತಂದಿದ್ದಾರೆ. ನಾವೂ, ನೀವೂ ಎಲ್ಲರೂ ಒಂದುಗೂಡಬೇಕಾಗಿದ್ದರೆ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿರಬೇಕು ಎನ್ನುವ ದೃಷ್ಟಿ ಇದೆಯೇ ಹೊರತು ಯಾವತ್ತಿಗೂ ಸಮ್ಮಿಶ್ರ ಸರ್ಕಾರ ಇರಬೇಕೆಂದಲ್ಲ. ಇಂಗ್ಲೆಂಡಿನಲ್ಲಿ, ಅಮೆರಿಕದಲ್ಲಿ ಮತ್ತು ಇತರ ದೇಶಗಳಲ್ಲಿ ಸಹ ಕೆಲವು ಸಂದರ್ಭಗಳಲ್ಲಿ ಸಮ್ಮಿಶ್ರ ಸರ್ಕಾರವಿತ್ತು. ದೇಶವು ಇವತ್ತಿನ ಪರಿಸ್ಥಿತಿಯೊಳಗೆ ನಮ್ಮಲ್ಲಿಯೂ ಸಮ್ಮಿಶ್ರ ಸರ್ಕಾರವಿದ್ದರೆ. ಜನತೆಯನ್ನು ತನ್ನ ಕಡೆಗೆ ಎಳೆಯತಕ್ಕ ಶಕ್ತಿ, ಸಾಮರ್ಥ್ಯ ಅದಕ್ಕೆ ಇರುತ್ತದೆನ್ನುವ ಒಂದೇ ದೃಷ್ಟಿಯಿಂದ ತಂದಿದ್ದಾರೆ.

ರಾಷ್ಟ್ರೀಯ ರಕ್ಷಣಾ ಸಮಿತಿಯನ್ನು ರಚನೆ ಮಾಡಿದ್ದಾರೆ. ಅದರಲ್ಲಿ ಸರ್ವಪಕ್ಷಗಳ ಪ್ರತಿನಿಧಿಗಳೂ ಇದ್ದಾರೆ. ಕೇಂದ್ರ ಸಮಿತಿಯಲ್ಲಿಯೂ ಇದ್ದಾರೆ, ರಾಜ್ಯದ ಮಟ್ಟದಲ್ಲಿಯೂ ಇದ್ದಾರೆ. ಇಂದಿರಾಗಾಂಧಿಯವರ ಅಧ್ಯಕ್ಷತೆಯಲ್ಲಿರುವ ಈ ಸಭೆಯಲ್ಲಿ ಕಾಂಗ್ರೆಸ್‌ನವರಿದ್ದಾರೆ. ಪಕ್ಷಾತೀತ ಸದಸ್ಯರಿದ್ದಾರೆ, ಎಲ್ಲ ಪಕ್ಷದವರೂ ಇದ್ದಾರೆ. ರಾಜ್ಯದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿಯಿದ್ದ ಸಮಯದಲ್ಲಿ ಪ್ರಜೆಗಳ ಹಕ್ಕುಬಾಧ್ಯತೆಗಳ ರಕ್ಷಣೆಗೋಸ್ಕರ ನಮ್ಮ ಮೇಲೆ ಆಕ್ರಮಣ ನಡೆಸಿರುವ ನೆರ ರಾಷ್ಟ್ರದವರನ್ನು ಹಿಮ್ಮೆಟ್ಟಿಸಲು ಎಲ್ಲರೂ ಇವತ್ತು ಸಹಾಯ ಮಾಡಬೇಕು, ದೇಶದ ಸಂರಕ್ಷಣೆಗೆ ಕಂಕಣಬದ್ಧರಾಗಬೇಕು, ಮಹಾಜನಗಳೇ ನಾವೂ ನೀವೂ ಎಲ್ಲ ಒಂದೇ, ಎಲ್ಲರೂ ದೇಶವನ್ನು ಸಂರಕ್ಷಣೆ ಮಾಡಬೇಕು ಎಂದು ಶ್ರೀಮತಿ ನಾಗರತ್ನಮ್ಮನವರು ಹೇಳಿದ ವಾಕ್ಯಗಳನ್ನು ನಾನು ಕೇಳಿದ್ದೇನೆ. ಇವತ್ತಿನ ದಿನದ ಅವರು ಹೇಳಿದ್ದನ್ನೂ ಕೇಳಿದ್ದೇನೆ. ದಾನಯ್ಯ ಗಂಟೆಬಾರಿಸಿದ, ವೆಂಕಟಸ್ವಾಮಿ ಬವನಾಶಿ ತಗೆದುಕೊಂಡು ಹೋದ, ಜಂಗಮಯ್ಯ ಚೀಲ ತಗೆದುಕೊಂಡು ಹೋದ ಎಂದು ಕಥೆ ಹೇಳುತ್ತಾರೆ. ಕಥೆಯು ವಿಷಯವನ್ನು ನಿಜವಾಗಿಯೂ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ಅಕ್ಕಮಹಾದೇವಿಯವರ್ಣರಿಸುವ ಗುಣಗಳನ್ನಲ್ಲ ಅಕ್ಷರ ಮಾತಿಕೊಂಡಿದ್ದಾರೆ. ಅವರು ಹೇಳುವುದನ್ನು ಕೇಳಲು ಬಹಳ ಇಂಪಾಗಿರುತ್ತದೆ. ಈ ಸಂದರ್ಭದಲ್ಲಿ ಅವರು ಆ ಮಾತನ್ನು ಆಡಿದ್ದು ಸರಿಯೇ ಎಂದು ನಾನು ಶ್ರೀಮತಿ ನಾಗರತ್ನಮ್ಮನವರನ್ನು ತಮ್ಮ ಮೂಲಕ ಕೇಳಬೇಕೆಂದು ಆಸೆ ಪಡುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನಾನು ಹೇಳಿದ್ದು ಸರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವತ್ತಿನ ತುರ್ತುಪರಿಸ್ಥಿತಿಯಲ್ಲಿ ಮಾತ್ರ ಸಮ್ಮಿಶ್ರ ಸರ್ಕಾರವಿರಬೇಕು. ಹರೇ ಕೃಷ್ಣ ಮೆಹತಾಬರು ಬಿಹಾರದಲ್ಲಿ ಕಾಂಗ್ರೆಸ್ಸಿಗೆ ಬಹುಮತ ಬಾರದೆಇರುವಾಗ ಯಾರು ಯಾರನ್ನೋ ಸೇರಿಸಿಕೊಂಡು, ಗಣತಂತ್ರ ಪರಿಷತ್ ಮತ್ತು ರಾಜಮಹಾರಾಜರುಗಳನ್ನು ಸೇರಿಸಿಕೊಂಡು ಸರ್ಕಾರ ರಚನೆ ಮಾಡಿ ಕೆಲಸ ಮಾಡಿದ್ದು ಗೊತ್ತಿದೆ. ಮದ್ರಾಸಿನಲ್ಲಲ್ಲ ಪ್ರಕಾಶಂ ಅವರು ಮಂತ್ರಿಮಂಡಲ ಮಾಡುವಾಗ ಏನು ಮಾಡಿದರು ಎಂಬುದನ್ನೆಲ್ಲ ಅವರು ತಿಳಿದುಕೊಂಡಿದ್ದರೆ, ಈ ವಿಷಯದಲ್ಲಿ ಇಷ್ಟು ಲಘುವಾಗಿ ಮಾತನಾಡುತ್ತಿರುವಲ್ಲ. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಅಸ್ತಿತ್ವಕ್ಕೆ ಬಂದಾಗ್ಗೆ ಶ್ರೀ ಕೆ. ಸಿ. ರೆಡ್ಡಿಯವರ ಮಂತ್ರಿಮಂಡಳದಲ್ಲಿ ಸಮ್ಮಿಶ್ರ ಸರಕಾರದ ರೂಪ ರೇಖೆಗಳು ಇದ್ದುವು. ಅದನ್ನು ನಾನು ಕಣ್ಣಿನಿಂದ ನೋಡಿದ್ದೇನೆ. ಆಗ್ಗೆ ಇಷ್ಟು ಲಘುವಾಗಿ ಯಾರು ಮಾತನಾಡುತ್ತಿರಲಲ್ಲ. ಸಮ್ಮಿಶ್ರ ಸರಕಾರ ಮಾಡಲು ಸಾಧ್ಯವಿಲ್ಲ, ಏಕಪಕ್ಷೀಯ ಸರಕಾರ ಇರಬೇಕೆಂದು ಹೇಳುವುದು ನನಗೆ ಅರ್ಥವಾಗುವುದಿಲ್ಲ. ಇಷ್ಟು ವ್ಯಂಗ್ಯವಾಗಿ ಇದನ್ನು ಕಾಣುವುದು ಸರಿಯಲ್ಲ. ನೀವು ಹೇಳುವುದು ಒಂದು, ಮಾತನಾಡುವುದು ಒಂದು ಆದರೆ ಮನಸ್ಸಿನಲ್ಲಲ್ಲ ಇರುವುದು ಇನ್ನೊಂದು, ಆಚರಣೆ ಮಾಡುವುದು ಮತ್ತೊಂದು. ಈ ರೀತಿ ಇದೆ ನಿಮ್ಮ ಕಾರ್ಯಾಚರಣೆ. ನಿಮಗೆ ಇಂದು ಈ ಸಭೆಯಲ್ಲಿ ಸಂಖ್ಯಾಬಲ ಇರುವುದರಿಂದ ಈ ನಿರ್ಣಯ ಒಪ್ಪದೇ: ಇದನ್ನು ತಳ್ಳಿ ಹಾಕಬಹುದು. ನಮ್ಮಲ್ಲಿ ಯಾರಿಗೂ ಅಧಿಕಾರದ ಚಪಲ ಇಲ್ಲ. ಇಂದು ದೇಶದಲ್ಲಿ ಜನ ಏನು ಅಂದುಕೊಳ್ಳುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾದುದು ಅವಶ್ಯಕ. ಶ್ರೀಮತಿ ನಾಗರತ್ನಮ್ಮನವರು ಒಂದು ಕತೆಯನ್ನು ಹೇಳಿದರು. ಈ ರಾಜ್ಯದಲ್ಲಿ ಏಕಪಕ್ಷೀಯ ಸರಕಾರ ಇರಬಾರದು ಎಂದು ಯಾರೂ ಹೇಳಲಿಲ್ಲ. ನಿನ್ನೆಯ ದಿನವೇ ಇಲ್ಲಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಭಾಷಣ ಮಾಡುತ್ತಾ ಹೇಳಿದ ಒಂದು ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. ವಿರೋಧ ಪಕ್ಷದವರು ಹೇಳುವುದನ್ನು ಲಘುವಾಗಿ ಭಾವಿಸಬಾರದು ಎಂದು ಅವರು ಹೇಳಿದರು. ಇದನ್ನು ದಿಕ್ಪ್ರವಾಗಿ ಯೋಚನೆ ಮಾಡಬೇಕು ಲಘುವಾಗಿ ಭಾವಿಸಬಾರದು. ಇಂದು 139 ಜನ ನೀವು ಅಧಿಕಾರ ಪಕ್ಷದಲ್ಲಿ ಇದ್ದೀರಿ. ಶ್ರೀ ಗೋಪಾಲ ಗೌಡರು

ಹೇಳಿದ ಹಾಗೆ ಚುನಾವಣೆಯಲ್ಲಿ ಶೇಕಡ 58 ರಷ್ಟು ಜನ ನೀವು ಬೇಡ ಎಂದು ಹೇಳಿದರು. ನಿಜವಾಗಿಯೂ ಹೇಳಬೇಕಾದರೆ ನೀವು ಭಾಷಣ ಮಾಡುವ ಕಾಲದಲ್ಲಿ ಹೇಳಿದ್ದೀರಿ. ಬೇಡ ಎಂದು ಯಾರಾದರೂ ಹೇಳಿದರೆ ಚಕಾರ ಶಬ್ದ ಆಡದೆ ಹೊರಗೆ ಹೋಗುತ್ತೇವೆ ಎಂದು ಹೇಳಿದ್ದೀರಿ ಆದುದರಿಂದ ಇಂಥ ಸಂದರ್ಭದಲ್ಲಿ ಬೇರೆ ಯಾವುದಾದರೂ ಸರಕಾರವಾಗಿದ್ದರೆ ಚಕಾರ ಶಬ್ದ ಹೇಳದೆ ಹೊರಗೆ ಹೋಗಬೇಕಿತ್ತು; ಅಧಿಕಾರದಲ್ಲಿ ಉಳಿಯುತ್ತಿರಲಿಲ್ಲ. ಸಮ್ಮಿಶ್ರ ಸರಕಾರ ಬೇಡ ಏಕ ಪಕ್ಷೀಯ ಸರಕಾರ ಇರಲಿ ಎಂದು ಶ್ರೀಮತಿ ನಾಗರತ್ನಮ್ಮನವರು ನಮಗೆ ಹೇಳಿದರು. ಅವರ ಭಾಷಣದ ವೈಖರಿಯನ್ನು ನೋಡಿದರೆ ವಿರೋಧ ಪಕ್ಷದವರನ್ನು ತೃಣೀಕರಿಸಿ ಅಂಥ ದೃಷ್ಟಿಯಿಂದ ಮಾತನಾಡಿದರು. ಸಮ್ಮಿಶ್ರ ಸರಕಾರದ ಬಗ್ಗೆ ಒಂದು ಕತೆ ಹೇಳಿ ನಮ್ಮನ್ನು ದಾನಯ್ಯಗಳಿಗೆ ಹೋಲಿಸಿದರು ಮತ್ತು ನಾವು ದಾನಯ್ಯಗಳೆಂದು ಹೇಳಿದರು.

11-00 A.M.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಶ್ರೀಮಾನ್ ಮುಕ್ಕಣ್ಣಪ್ಪನವರು ದಾನಯ್ಯ ಎಂದು ನಾನು ಹೇಳಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪತಕ್ಕೆ ನೇರವಾಗಿ ನಮ್ಮ ಮುಖಕ್ಕೆ ದಾನಯ್ಯನ ಕಥೆ ಹೇಳಬೇಕೆ? ಈ ರಾಜ್ಯದ ಮುಖ್ಯ ಮಂತ್ರಿಗಳೂ, ಹಿರಿಯ ನಾಯಕರೂ ಆಗಿರುವ ಶ್ರೀಮಾನ್ ನಿಜಲಿಂಗಪ್ಪನವರು ಒಂದು ಮಾತು ಹೇಳಿದರು, ಮಾತನಾಡುವಾಗ್ಗೆ ಗಂಭೀರದ ಎಲ್ಲೆ ಮೀರಬಾರದು ಎಂದು ಹೇಳಿದರು. ಇದನ್ನು ನಮಗೆ ಹೇಳಿದರು ಆದರೆ ತಮ್ಮ ಪಕ್ಷದವರಿಗೆ ಹೇಳಲಿಲ್ಲ. ನಾವು ಎಲ್ಲೆ ಮೀರಿ ಯಾವುದೂ ಹೇಳಲಿಲ್ಲ. ಜಾಣನಿಗೆ ಮಾತಿನ ಪೆಟ್ಟು ಕತ್ತೆಗೆ ದೊಣ್ಣೆಯ ಪೆಟ್ಟು ಎಂದು ಗಾದೆ ಮಾತಿದೆ. ಟೀಕೆ ಮಾಡುವುದನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದು ಒಳ್ಳೆಯದು. ಆಗಸನ ಕತ್ತೆಯ ಹಾಗೆ ಎಷ್ಟು ದೊಣ್ಣೆ ಪೆಟ್ಟು ಬಿದ್ದರೂ ಎಂಥ ಭಾರ ಹೇರಿದರೂ ಅರ್ಥ ಮಾಡಿಕೊಳ್ಳದೇ ಇರುವ ಹಾಗೆ ಮಾಡುವುದು ಸರಿಯಲ್ಲ. ಆಡಳಿತ ಪಕ್ಷದಲ್ಲಿರತಕ್ಕಂಥವರು ನಾವೇ ಮೇಧಾವಿಗಳು, ನಾವೇ ಬುದ್ಧಿವಂತರು, ನಮ್ಮ ಮುಂದೆ ಯಾರೂ ಇಲ್ಲ ಎಂದು ಮಾತ್ರ ಅರ್ಥ ಮಾಡಿಕೊಳ್ಳಬಾರದು. ಈ ನಿರ್ಣಯದ ಮೂಲಕ ಒಂದು ಸಲಹೆ ಬಂದಿದೆ. ಸಮ್ಮಿಶ್ರ ಸರಕಾರ ಇದ್ದರೆ ಒಳ್ಳೆಯದಲ್ಲವೇ? ಇಂಥ ಸಮ್ಮಿಶ್ರ ಸರಕಾರ ಇರಬೇಕೇ ಬೇಡವೇ ಎಂಬುದಕ್ಕೆ ಮಾತನಾಡುವಾಗ್ಗೆ ವಿರೋಧ ಪಕ್ಷದವರನ್ನು ತೃಣೀಕರಿಸಿ ಮಾತನಾಡುವುದು ಸರಿಯಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಸ್ವಾಮಿ, ನಾನು ಹೇಳಿದ್ದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ನಾನು ಮಾತನಾಡುವಾಗ್ಗೆ ಗಾಂಭೀರ್ಯ ಘನತೆ ಬಿಟ್ಟು ಮಾತನಾಡಲಿಲ್ಲ, ತೃಣೀಕರಿಸಿ ಮಾತನಾಡಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇರಳ ರಾಜ್ಯದಲ್ಲಿ ಸಮ್ಮಿಶ್ರ ಸರಕಾರ ರಚನೆಯಾದುದು ಹೋಯಿತು. ಒರಿಸ್ಸಾದಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಹರೇ ಕೃಷ್ಣ ಮೆಹತಾಬ್ ಅವರು ಇರಲಿಲ್ಲವೇ? ಸಮ್ಮಿಶ್ರ ಸರಕಾರ ಇರಲು ಏಕೆ ಸಾಧ್ಯವಾಗಲಿಲ್ಲ? ನಮ್ಮ ಮುಖ್ಯ ಮಂತ್ರಿಗಳವರಿಗೆ ಗಜಿಬಿಜಿ ಇರಕೂಡದು. ಪ್ರತಿಯೊಬ್ಬ ಕಾಂಗ್ರೆಸ್ ಪಕ್ಷದ ಸದಸ್ಯನು ಅವರ ಹತ್ತಿರ ಬಂದು ನನಗೆ ಪ್ರಾತಿನಿಧ್ಯ ಇದೆ, ನನಗೆ ಮಂತ್ರಿ ಪದ ಕೊಡಿ ಮಂತ್ರಿ ಮಂಡಳದಲ್ಲಿ ಸೇರಿಸಿಕೊಳ್ಳಿ ಎಂದು ಹೇಳುತ್ತಾನೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಸಮ್ಮಿಶ್ರ ಸರಕಾರ ರಚನೆ ಮಾಡುವುದು ಒಳ್ಳೆಯದು. ಯಾರು ರಾಜ್ಯಾದಾಡಳಿತದ ಸೂತ್ರಹಿಡಿದು ರಾಜ್ಯ ರಥವನ್ನು ಸರಿಯಾಗಿ ಹೊಡೆಯಬಲ್ಲರೋ, ದಡವನ್ನು ಮುಟ್ಟಿಸಬಲ್ಲರೊ ಅಂಥವರ ಕೈಯಲ್ಲಿ ಇದನ್ನು ಕೊಟ್ಟು ಬಿಡೋಣ. ಒಂದು ಸಮಿತಿ ಚೇರಮನ್ ಸ್ಥಾನ ಕೊಡದೇ ಇದ್ದರೆ ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಕೊಟ್ಟೀದ್ದೀರಿ ಎಂದು ನಿಮ್ಮ ಪಕ್ಷದಲ್ಲಿಯ ಸದಸ್ಯರೇ ಪ್ರಶ್ನೆ ಒಂದು ಪ್ರಶ್ನೆ ಕೇಳಿದರು. ಅದು ಸರಿಯಲ್ಲ. ಎರಡೂ ಕಡೆ ಯೋಗ್ಯರಾದವರು ಇಲ್ಲವೇ? ನಾವು ಪ್ರತಿ ಪಕ್ಷದವರು ಒಂದು ಚಕಾರ ಶಬ್ದ ಈ ಬಗ್ಗೆ ಹೇಳಿದ್ದೇವೆಯೇ?

ಯಾವ ಕಮಿಟಿ ಮಾಡಿರಿ. ಯಾವ ಬೋರ್ಡ್ ರಚನೆ ಮಾಡಿರಿ, ಯಾರನ್ನಾದರೂ ಚೇರ್ಮನ್ ಮಾಡಿರಿ—ಇವರನ್ನು ಹಾಕಿ ಇವರನ್ನು ಬಿಡಿ ಎಂದು ನಾವು ಏನಾದರೂ ಹೇಳುತ್ತೇವೆಯೇ ಅದನ್ನು ಶ್ರೀಮಾನ್ ನಿಜಲಿಂಗಪ್ಪನವರು ಏಕೆ ಯೋಚನೆ ಮಾಡುವುದಿಲ್ಲ? ಅವರ ಭವ್ಯ ವಾಣಿಯಲ್ಲಿ ಹೇಳುತ್ತಿರುವುದನ್ನು ಈ ಸಭೆ ಒಪ್ಪುವುದಿಲ್ಲ, ನಮ್ಮ ವಿರೋಧ ಪಕ್ಷದವರು ಯಾರು ಬಂದು ನನ್ನನ್ನು ಈ ಕಮಿಟಿಗೆ ಹಾಕಿ ಎಂದು ಕೇಳುವುದಿಲ್ಲ, ಚೇರ್ಮನ್ ಮಾಡಿ ಎಂದು ಕೇಳುವುದಿಲ್ಲ ಹಾಗಿರುವಾಗ ವಿರೋಧ ಪಕ್ಷದವರ ಮೇಲೆ ಏಕೆ ಅವರಿಗೆ ಆಗ್ರಹ! ನೆನ್ನೆ ರಾಷ್ಟ್ರಪತಿಗಳು ಅಪ್ಪಣೆಕೊಡಿಸಿದರು ವಿರೋಧ ಪಕ್ಷದವರನ್ನು ಬಹಳ ಗೌರವದಿಂದ ಕಾಣಬೇಕು, ಅವರನ್ನು ಆಳುವ ಪಕ್ಷದವರು

(ಶ್ರೀ ಸಿ. .ಜೆ. ಮುಕ್ಕಣ್ಣಪ್ಪ)

ಬಹಳ ನಮ್ರತೆಯಿಂದ ನೋಡಿಕೊಳ್ಳಬೇಕೆಂದು. ಹಾಗಿರುವಾಗ ನಾವೇನು, ಸ್ವಾಮಿ, ನಾಯಿ, ಕತ್ತೆ, ದಾನಮ್ಮಗಳೇ? ಅವರ ಪಕ್ಷದವರು ಆ ರೀತಿ ಎಲ್ಲಾ ಹೇಳುತ್ತಾರೆಯಲ್ಲಾ, ಅದು ಸರಿಯೇ ಎಂಬುದನ್ನು ನೀವೇ ಯೋಚನೆ ಮಾಡಿ. ನಾವು ಸಮ್ಮಿಶ್ರ ಸರ್ಕಾರ ಬೇಡ ಎಂದು ಹೇಳಲಿಲ್ಲ, ಇಂತಿಂತಹ ತೊಂಬವಂಚ ಇದೆ, ಅದು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿದರೆ ಅದನ್ನು ಬಿಟ್ಟು ನೀವು ಏನೇನೋ ಹೇಳುತ್ತಾ ಇದ್ದೀರಿ. ಸಮ್ಮಿಶ್ರ ಸರ್ಕಾರ ಇದ್ದಾಗ ಕೇರಳದಲ್ಲಿ ಭೂನುಧಾರಣೆ ಬಂತು, ಆಗ ತಮ್ಮಲ್ಲಿ ಕೆಲ ಕೆಲವರು ತಮ್ಮ ಹಿತರಕ್ಷಣೆಗೆ ಆ ಸರ್ಕಾರವೇ ಬೇಡ ಎಂದು ಡೆಲ್ಲಯವರೆಗೂ ದೂರು ಹೋದರು. ಅದನ್ನು ಇವತ್ತು ತಾವು ಯಾರೂ ಯೋಚನೆ ಮಾಡಲಿಲ್ಲವೇ ಎಂದು ಕೇಳುತ್ತೇನೆ. ಕೇರಳದಲ್ಲಿ ಭೂಸೂಧಾರಣೆಯನ್ನು ಇಂಪ್ಲಿಮೆಂಟ್ ಮಾಡುವಾಗ ಕೆಲವು ರಕ್ಷಣೆಗಳಿಗೆ ಮಾಡಿದಂಥ ಹಿತಗಳಿಗೆ ಕೊಂದರೆಯಾಯಿತು ಎಂದು ಹೇಳಿ ಆ ಸರ್ಕಾರವೇ ಬೇಡ ಎಂದು ರಾಷ್ಟ್ರಾಧ್ಯಕ್ಷರವರೆಗೂ ದೂರು ಹೋದಂಥ ಜನ ನಾವಲ್ಲ. ಮಂತ್ರಿ ಮಂಡಲ ಯಾವುದೇ ಇರಲಿ ಶ್ರೀಮತಿ ನಾಗರತ್ನಮ್ಮನವರಿಗೆ ಹೇಳುತ್ತೇನೆ ಕೇಂದ್ರ ಸರ್ಕಾರದವರು ಮಧ್ಯೆ ಪ್ರವೇಶ ಮಾಡುವುದಾದರೆ ಆ ಸರ್ಕಾರದಲ್ಲಿ ಒಂದು ಅರ ಘಳಿಗೆಯೂ ಇರುವುದಿಲ್ಲ ಎಂದು ಹೇಳಿ ಕೇರಳದ ಗೃಹ ಮಂತ್ರಿ ಚಾಕೋ ಅವರು ತಮ್ಮ ಊರಿಗೆ ಹೋದರು. ತಮ್ಮ ಆಶೆಯೂ ಅದೇ ಆಗಿತ್ತು. ಏಕಪಕ್ಷವಾಗಿರಕ್ಕೆ ಕಾಂಗ್ರೆಸ್ ಸರ್ಕಾರದಲ್ಲಿ ಕೇರಳದ ಗೃಹ ಸಚಿವರಾಗಿದ್ದ ಚಾಕೋರವರು ಒಂದು ಅರೆ ಘಳಿಗೆಯೂ ಇರುವುದಿಲ್ಲ ಎಂದು ಮುನಿಸಿಕೊಂಡು ಹೊರಟು ಹೋದರು ಏಕಪಕ್ಷ ಸರ್ಕಾರ ಇದ್ದರೆ ಡಿಕ್ಟೇಟರ್‌ಷಿಪ್ ಮಾಡುತ್ತಾರೆ; ಸರ್ವಾಧಿಕಾರ ಬರುತ್ತದೆ, ಮನಸ್ಸಿಗೆ ಬಂದ ವ್ಯವಹಾರ ಮಾಡುತ್ತಾರೆ ಅದಕ್ಕೆ ಈ ತುರ್ತು ಪರಿಸ್ಥಿತಿಯಲ್ಲಿ ಸಮ್ಮಿಶ್ರ ಸರ್ಕಾರ ಇರಬೇಕೆಂದು ಹೇಳಿ ಶ್ರೀಮಾನ್ ವೀರಭದ್ರಪ್ಪ ವೀರಪ್ಪನವರು ಈ ನಿರ್ಣಯವನ್ನು ತಂದಿದ್ದಾರೆಯೇ ಹೊರತು ಈ ರಾಜ್ಯದಲ್ಲಿ ಯಾವಾಗಲೂ ಸಮ್ಮಿಶ್ರ ಸರ್ಕಾರ ಇರಬೇಕೆಂದು ಅವರು ಆಶೆ ಇಟ್ಟುಕೊಂಡಿಲ್ಲ. ಎಲ್ಲಿಯವರೆಗೆ ತುರ್ತು ಪರಿಸ್ಥಿತಿ ಇದೆ ಎಂದು ಘೋಷಣೆ ಮಾಡುತ್ತೀರಿ, ತುರ್ತು ಪರಿಸ್ಥಿತಿ ಇದೆ ಎಂದು ತಿಳಿದುಕೊಂಡಿದ್ದೀರಿ ಅಲ್ಲಯವರೆಗೆ ಈ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಇರಬೇಕೆಂದು ಹೇಳುತ್ತಾ ಇದ್ದೇವೆಯೇ ಹೊರತು ಇನ್ನಾವ ದೃಷ್ಟಿಯಿಂದಲೂ ಅಲ್ಲ. ಹಾಗಿರುವಾಗ ಈ ನಿರ್ಣಯದಲ್ಲಿರುವ ಅರ್ಥವನ್ನು ಬಿಟ್ಟು ಅವರು ಏನೇನೋ ಹೇಳಿದರು: ನಿಜಲಿಂಗಪ್ಪನವರ ಸರ್ಕಾರದಲ್ಲಿ ಸೇರಿಕೊಳ್ಳುವುದಕ್ಕೆ ಹೊರಟು ಬಿಟ್ಟಿದ್ದಾರೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಅದು ನ್ಯಾಯವಲ್ಲ ಎಂದು ಬಹಳ ವಿನಯದಿಂದ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇವೆ. ನಮಗೆ ಆತುರ ಇಲ್ಲ ನಮಗೆ ಇನ್ನೂ ವಯಸ್ಸು ಇದೆ, ಬೇಕಾದಷ್ಟು ಕಾಲ ಇದೆ, ಅಲ್ಲಿಗೆ ಬರುವುದಕ್ಕೆ ದಾರಿ ಇದ್ದರೆ ನಮ್ಮ ಸರ್ವ ಪ್ರಯತ್ನದಿಂದ ಬರುತ್ತೇವೆಯೇ ಹೊರತು ನಿಮ್ಮ ಹತ್ತಿರ ಅಂಗಲಾಚಿಕೊಂಡು, ಬೇಡಿಕೊಂಡು 'ಭವತಿ ಭಿಕ್ಷಾಂ ದೇಹಿ' ಎಂದು ಭಿಕ್ಷೆ ಬೇಡುವುದಿಲ್ಲ, ಶಕ್ತಿ ಇದ್ದರೆ ಬರುತ್ತೇವೆ, ಇಲ್ಲದೇ ಇದ್ದರೆ ಶಕ್ತಿ ಸಂಪಾದನೆ ಮಾಡಿಕೊಂಡು ಬರುತ್ತೇವೆ. ಶಕ್ತಿ ಇದ್ದರೆ ಆಳುತ್ತೇವೆ, ನಮ್ಮಲ್ಲಿ ಶಕ್ತಿ ಇಲ್ಲ ಎಂದು ತೋರಿಸಿಕೊಟ್ಟರೆ ಅಲ್ಲಿಂದ ಇಳಿದು ಬರುತ್ತೇವೆ, ಅಷ್ಟೇ ಹೊರತು ನಿಮ್ಮ ಹತ್ತಿರ 'ಭವತಿ ಭಿಕ್ಷಾಂ ದೇಹಿ' ಎಂದು ಭಿಕ್ಷಾ ಪಾತ್ರೆ ಹಿಡಿದುಕೊಂಡು ಬರುವುದಿಲ್ಲ. ಇದನ್ನು ತಾವು ಅರ್ಥ ಕೊಡಿಕೊಳ್ಳಬೇಕು, ಸಮ್ಮಿಶ್ರ ಸರ್ಕಾರ ಇರಬೇಕಾದರೆ ಈಗಿನ ಪರಿಸ್ಥಿತಿ ಏನಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಮನಸ್ಸಿಗೆ ಬಂದಂತೆ ಮಾತನಾಡುವುದು ಸರಿಯಲ್ಲ, ಇದನ್ನು ಅಷ್ಟು ನಿಕೃಷ್ಟ ಭಾವನೆಯಿಂದ ನೋಡಬಾರದು ಎಂದು ಹೇಳಿ, ಇವತ್ತು ಸಮ್ಮಿಶ್ರ ಸರ್ಕಾರ ಇರಬೇಕು ಇದ್ದರೆ ಒಂದಲ್ಲ ಒಂದು ರೀತಿಯಲ್ಲಿ ಹೊಂದಾಣಿಕೆ ಇರುತ್ತದೆ ತುರ್ತು ಪರಿಸ್ಥಿತಿ ಇರುವವರೆಗಾದರೂ ಸಮ್ಮಿಶ್ರ ಸರ್ಕಾರ ಇರುವುದು ಒಳ್ಳೆಯದು ಎಂದು ಹೇಳಿ ನಾನು ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ (ನೂರತ್ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವೀರಪ್ಪನವರು ತಂದ ಈ ಸೂಚನೆಯನ್ನು ಬೆಂಬಲಿಸಿ ಕೆಲವು ವಿಚಾರಗಳನ್ನು ಹೇಳಲು ಬಯಸುತ್ತೇನೆ. 1938ನೇ ಇಸವಿಯಲ್ಲಿ ಮಹಾ ಯುದ್ಧವು ಘೋಷಿಸಲ್ಪಟ್ಟಾಗ ಇಂಗ್ಲೆಂಡಿನಲ್ಲಿ ಯಾವ ಒಂದು ಪರಿಸ್ಥಿತಿ ಆಯಿತು ಎಂಬುದನ್ನು ಇಲ್ಲಿ ಜ್ಞಾಪಕಕ್ಕೆ ತರಲು ಬಯಸುತ್ತೇನೆ. ಆ ದಿವಸ ಅಲ್ಲಿ ಚೇಂಬರ್ಲಿನ್ ಸರ್ಕಾರ ಇತ್ತು, ಅವರ ಧೋರಣೆಯಿಂದಾಗಿ ವಿಫಲರಾದಾಗ ಸಮ್ಮಿಶ್ರ ಸರ್ಕಾರವನ್ನು ರಚಿಸಿ ಚರ್ಚಿಲ್‌ರವರು ಆ ಸರ್ಕಾರದ ನಾಯಕತ್ವವನ್ನು ವಹಿಸಿಕೊಂಡರು, ರಾಷ್ಟ್ರದ ಶಕ್ತಿ ಸಂಘಟನೆ ಮಾಡಿಕೊಂಡರು, ತದನಂತರ ನಡೆದಂಥ ಯುದ್ಧವನ್ನು ಯಾವ ರೀತಿ ಎದುರಿಸಿದರು ಎಂಬ ಚರಿತ್ರಾರ್ಹ ಘಟನೆಗಳ ಬಗ್ಗೆ ತಮ್ಮ ಜ್ಞಾಪಕವನ್ನು ತರಬಯಸುತ್ತೇನೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈ ಸಮ್ಮಿಶ್ರ ಸರ್ಕಾರದಲ್ಲಿ ತಮಗೆ ಯಾವ ಬಾಬು ಬೇಕು?

Sri SANJEEVANATH AIKALA.—I can tell the Hon'ble Member that I do not want to be at the sufference of the Ministers. If I want to be there, I will go there by my merits.

ನಮ್ಮ ಸ್ವಶಕ್ತಿ ಸಾಮರ್ಥ್ಯದಿಂದ ದೇಶದ ಜನರಿಗೆ ಒಳ್ಳೆಯದು ಮಾಡುವ ದೃಷ್ಟಿಯಿಂದ ಆ ಒಂದು ಸ್ಥಾನವನ್ನ ಬಯಸುತ್ತೇವೆಯೇ ಹೊರತು ಕೆಟ್ಟದ್ದು ಮಾಡುವುದಕ್ಕೆ ಬಯಸುವುದಿಲ್ಲ. ನಮ್ಮ ಶಕ್ತಿ ನಮ್ಮ ಸಾಮರ್ಥ್ಯ ನಮ್ಮ ಧೋರಣೆಯಿಂದ ಜನತೆಯ ವಿಶ್ವಾಸವನ್ನು ಸಂಪಾದನೆ ಮಾಡಿಕೊಂಡು ಆ ಸ್ಥಾನಕ್ಕೆ ಬರಬೇಕೆಂದು ಬಯಸುತ್ತೇವೆಯೇ ಹೊರತು ನಿಮ್ಮನ್ನು ಅಂಗಲಾಚಿ ಬೇಡಿಕೊಂಡು ನಿಮ್ಮಲ್ಲಿ ಕೆಲವರು ಮಾಡಿದ ಹಾಗೆ ಮಾಡಲು ನಾವು ಎಂದೂ ಬಯಸುವುದಿಲ್ಲ, ಆ ರೀತಿ ಮಾಡಿದ್ದೇ ಆದರೆ ಅದು ದೇಶದ ಜನತೆಗೆ ದ್ರೋಹ ಮಾಡಿದಂತಾಗುತ್ತದೆ.

ಶ್ರೀ ಎ. ಕೃಷ್ಣಶೆಟ್ಟಿ (ಮುಂಗಳೂರು II).—ಅಶೋಕ ಮೆಹತಾರವರು ಪ್ಲಾನಿಂಗ್ ಕಮೀಷನ್‌ನ ಡೆಪ್ಯೂಟಿ ಚೇರ್ಮನ್ ಆಗಿ ಕೆಲಸ ಮಾಡಲು ಒಪ್ಪಿಕೊಂಡಿದ್ದಾರಲ್ಲಾ ಅದಕ್ಕೆ ಏನು ಹೇಳುತ್ತೀರಿ ? ಅದು ನಿಮ್ಮ ಪಾಲಿಸಿಗೆ ಸರಿಹೋಗುತ್ತದೆಯೇ ?

ಶ್ರೀ ಸಂಜೀವ ನಾಥ ಐಕಳ.—ಅದು ಅವರ ಶಕ್ತಿ ಸಾಮರ್ಥ್ಯ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. That itself shows that there is lack of people of calibre and integrity among the Congressmen, to fill the post in such a highest Planning body.

Mr. CHAIRMAN.—I can allow the Member to speak only on the resolution.

Sri J. H. SHAMSUDDIN (Deputy Minister, Electricity).—If this is the way in which the Opposition behaves while discussing resolution, then woe be to the Party.

Mr. CHAIRMAN.—I have told the Hon'ble Member to confine himself to the resolution.

ಶ್ರೀ ಸಂಜೀವನಾಥ ಐಕಳ.—ಆ ಆಯೋಗ ಈ ಹೊತ್ತು...

Sri S. M. KRISHNA (Maddur).—With due respect to the Chiar. What we are considering now is that in the context of the emergency that is prevailing in the country, it is necessary in the interest of the State that an All-Party Government is established in the State. He has been trying to strengthen his argument by quoting instances. He is trying to make out a case that there is need for an all-Party Government.

Sri J. H. SHAMSUDDIIN.—Then why did they disapprove Sri Asok Mehta joining the Government of India and why should they try to expel him from their Party ?

ಶ್ರೀ ಸಂಜೀವನಾಥ ಐಕಳ.—ನಾವೀಗ ಸಮ್ಮಿಶ್ರ ಸರ್ಕಾರ ಬೇಕೇ ಬೇಡವೇ ಎಂಬುದನ್ನು ಚರ್ಚೆ ಮಾಡುತ್ತಿದ್ದೇವೆ.

Mr. CHAIRMAN.—I want to draw the attention of the Hon'ble Member to this. How does it arise ? I cannot allow it.

(Sri J H. Shamsuddin continued to interrupt and said 'you have disowned Sri Ashok Mehta)

Sri SANJEEVANATH AIKALA.—Either you do not read newspapers or you read too much between the lines.

Sri J. H. SHAMSUDDIN.—I read newspapers and I am intelligent enough to read between the lines also.

Sri SANJEEVANATH AIKALA.—That is why the Hon'ble Minister makes this sort of perversity in his opinion.

Mr. CHA RMAN.—Let the Hon'ble Member conclude his speech within five minutes.

ಶ್ರೀ ನಂಜೀವನಾಥ ಐಕಳ.—ಇವರು ಹಿನ್ನೆಲೆಯಾಗಿ ಇದರಲ್ಲಿ ಅಡಗಿರತಕ್ಕ ತತ್ವಗಳಿಗೆ ಇದರಲ್ಲಿ ಅಡಗಿರತಕ್ಕ ಒಂದು ನೀತಿಗೆ ಅನುಗುಣವಾದ ದೃಷ್ಟಾಂತವನ್ನು ಕೊಡತಕ್ಕ ಬಗ್ಗೆ ನಾನು ಆ ಮಾತನ್ನು ಹೇಳಲೇಬೇಕು. ಆ ಪ್ಲಾನಿಂಗ್ ಸಮಿತಿಯಲ್ಲಿ ಏನು ಒಂದು....

ಸಭಾಪತಿಯವರು.—ಅದು ಪ್ಲಾನಿಂಗ್ ಸಮಿತಿಯೇ ಏನಾ ಅದು ಸರ್ಕಾರವಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಂಗ್ರೆಸ್ ಪಕ್ಷದವರು ಮಾತನಾಡುವಾಗ ಅವರು ದಾನಯ್ಯ ಜಂಗಮಯ್ಯ, ಇತ್ಯಾದಿ ಅನೇಕ ಹೆಸರುಗಳನ್ನು ಹೇಳಬಹುದು, ನಾವು ಒಬ್ಬ ಅಶೋಕ ಮಹಥಾ ಅವರ ವಿಚಾರ ಹೇಳಬಾರದೇನೋ ?

ಶ್ರೀ ನಂಜೀವನಾಥ ಐಕಳ.—ಅವರು ಒಂದು ತಪ್ಪು ಅಭಿಪ್ರಾಯದ ಮಾತನ್ನು ಹೇಳಿದ್ದಾರೆ. ಅವರ ಮೇಲೆ ಡಿಸಿಪ್ಲಿನೆರಿ ಆಕ್ಷನ್ ತೆಗೆದುಕೊಳ್ಳಬೇಕಾಗಿತ್ತು. ಆದುದರಿಂದ ಈ ನಿರ್ಣಯವನ್ನು ನಾವು ಈ ಒಂದು ಹೆನ್ನೆರೆಯ ಲ್ಲಿ ನೋಡಿದ್ದೇ ಆದರೆ ಈಗ ಒಂದು ಸಮ್ಮಿಶ್ರ ಸರ್ಕಾರವನ್ನು ನಿರ್ಮಿಸುವುದು ಎಷ್ಟು ಅಗತ್ಯವಾಯಿದು ಎಂಬುದು ಅದರಿಂದ ಗೊತ್ತಾಗುತ್ತದೆ. ಅವರು ಶ್ರೀ ನೆಹ್ರೂ ಅವರು ಅನುಸರಿಸುವ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಾರೆ. ಸರ್ಕಾರದವರ ಕೆಲವು ಧೋರಣೆಗಳನ್ನು ಒಪ್ಪದವರಿಗೆ ಅಲ್ಲಿರುವುದು ಎಷ್ಟು ಅನಾನುಕೂಲವಾಗುತ್ತದೆ ಎಂದು ಅವರು ಹೇಳಿದ್ದಾರೆ. ಈ ದೃಷ್ಟಿಯಿಂದ ಈ ದಿವಸ ಒಂದು ಸಮ್ಮಿಶ್ರ ಸರ್ಕಾರ ಬಹಳ ಅಗತ್ಯವಾಗಿದೆ.

ಇನ್ನು ಈ ಇಡೀ ಪಕ್ಷಗಳನ್ನೇ ಬಿಟ್ಟು ದೇಶಕ್ಕಾಗಿ ತನ್ನ ಇಡೀ ಜೀವನವನ್ನೇ ತೆಯ್ದಂಥ ಅಧಿಕಾರಕ್ಕೆ ಮನಗೊಡದ ಶ್ರೀ ಜಯಪ್ರಕಾಶ ನಾರಾಯಣರು ಈ ದಿವಸ ಈ ಅಧಿಕಾರ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರುವ ಪಕ್ಷಕ್ಕೆ ಒಂದು ಅಂಕುಶ ಪ್ರಾಯರಾಗಿರತಕ್ಕ ಅವರು ಏನು ಹೇಳಿದ್ದಾರೆ ಎಂಬುದನ್ನು ನಾನೀಗ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಅವರು ನಿರೂಪಿಸಿರತಕ್ಕ ಧೋರಣೆಯಲ್ಲಿ ತುಂಬಾ ಅರ್ಥ ಅಡಗಿದೆ. ಅವರು ದೇಶದಲ್ಲಿರತಕ್ಕ ಎಲ್ಲ ವರ್ಗಗಳೂ ರೈತ, ಕಾರ್ಮಿಕ, ಹೀಗೆ ಎಲ್ಲ ವರ್ಗಗಳೂ ಒಂದಾಗಿ ಅವುಗಳ ಒಟ್ಟು ಶಕ್ತಿಯನ್ನು ಒಂದು ಕಡೆ ಕ್ರೋಢೀಕರಿಸಿ ಒಂದು ರಾಷ್ಟ್ರೀಯ ಸರ್ಕಾರವನ್ನು ನಿರ್ಮಿಸಬೇಕು ಎಂದು ಅವರು ಹೇಳಿದ್ದಾರೆ. ಆದರೆ ಈ ಮಾತನ್ನು ಯಾರು ಹೇಳಿದ್ದಾರೆಯೋ ಅವರು ನಮ್ಮ ರಾಷ್ಟ್ರಕ್ಕೆ ಮುಂದಿನ ನಾಯಕರಾಗಬೇಕಾಗಿತ್ತು. ಅಂಥವರು ಹೇಳಿರತಕ್ಕ ಮಾತುಗಳಲ್ಲಿ ಯಾವ ಒಂದು ಸ್ವಾರ್ಥವೂ ಇರುವುದಿಲ್ಲ. ಇವು ಸ್ವಾರ್ಥಕ್ಕಾಗಿ ಹೇಳಿದ ಮಾತುಗಳೂ ಅಲ್ಲ .....

ಇನ್ನೂ ಆಳುವ ಪಕ್ಷಕ್ಕೆ ಸೇರಿರತಕ್ಕ ಶ್ರೀ ವಿನೋಬಾ ಭಾವೆಯವರು ಈ ವಿಚಾರದಲ್ಲಿ ಏನು ಹೇಳಿದ್ದಾರೆ ? ದೇಶದಲ್ಲಿರತಕ್ಕ ಸರ್ವ-ಶಕ್ತಿಗಳನ್ನೂ ಒಟ್ಟುಗೂಡಿಸಿ ಸರ್ವಸ್ವವನ್ನೂ ಒಟ್ಟುಗೂಡಿಸಿ ದೇಶದಲ್ಲಿರತಕ್ಕ ಜನರ ಸಂಕಟಗಳನ್ನು ಪರಿಹರಿಸುವಂಥ ಒಂದು ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕು ಎಂದು ಹೇಳಿದ್ದಾರೆ. ಚೈನಾ ಯುದ್ಧ ಪ್ರಾರಂಭವಾದಾಗ ಹಳ್ಳಿಗಳಲ್ಲಿರತಕ್ಕ ಜನಶಕ್ತಿಯನ್ನು ಒಟ್ಟುಗೂಡಿಸಿ ಅವರನ್ನು ಆಗಲೇ ಅಲ್ಲಿಂದ ಓಡಿಸದೆ ಕೈಬಿಟ್ಟರು. ಇದು ದೇಶದ ಒಂದು ದುರ್ದೈವ ಸಂಗತಿ. ಈ ಸರ್ಕಾರಕ್ಕೆ ಇಂದ ಅಂಥ ಒಂದು ಶಕ್ತಿಯಿಲ್ಲ. ಇದು ಈ ಹಾದಿಯಲ್ಲಿ ಅಸಮರ್ಥವಾಗಿದೆ. ಇಲ್ಲಿಗೆ 3-4 ತಿಂಗಳಿಗೆ ಹಿಂದೆ ಇದ್ದ ಜನಶಕ್ತಿ ಏನಿತ್ತೋ ಅದನ್ನು ಈಗ ಒಂದು ಹಿಡಿತದಲ್ಲಿಟ್ಟುಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಈ ಸರ್ಕಾರ ನಡೆಸುತ್ತಿರುವ ನೀತಿಯನ್ನು ನೋಡಿ ಆ ಚೈನಾ ವಿಚಾರದಲ್ಲಿ ಜನರು ಕಂಗಾಲಾಗಿದ್ದಾರೆ. ಈ ಸರ್ಕಾರದ ಮೇಲೆ ಜನರಿಗೆ ಸಂಪೂರ್ಣವಾಗಿ ವಿಶ್ವಾಸ ಕಳೆದು ಹೋಗಿದೆ. ಭರತಖಂಡದಲ್ಲಿರತಕ್ಕ ಎಲ್ಲಾ ರಾಜ್ಯಗಳೂ ಆಳುವ ಪಕ್ಷದ ಮೇಲೆ ಅವಿಶ್ವಾಸ ನಿರ್ಣಯಗಳನ್ನು ಮಂಡಿಸಿರುತ್ತವೆ. ಈ ದಿವಸ ಆಡಳಿತ ಪಕ್ಷದಲ್ಲೇ ವಿಶ್ವಾಸವಿಲ್ಲದಂಥ ಜನಗಳಿದ್ದಾರೆ. ದೇಶದಲ್ಲಿ ಅಂಥ ಪ್ರತಿಭೆಯುಳ್ಳ ಜನರೇ ಬೇರೆ ಇದ್ದಾರೆ. ಈ ದಿವಸ ಸಂಖ್ಯಾಬಲದಲ್ಲಿ ಈ ಆಡಳಿತ ಪಕ್ಷ ಬಲವಾಗಿದೆ ಎಂದು ಭಾವಿಸಿದ್ದರೆ ಇದಕ್ಕಿಂತಲೂ ಬಲವಾದ ಶಕ್ತಿಯುತ ಜನರು ಯಾವ ಪಾರ್ಟಿಗೂ ಸೇರದಂಥವರು ಬಹಳ ಜನ ಇದ್ದಾರೆ. ಅಂಥ ಶಕ್ತಿಗಳನ್ನೆಲ್ಲಾ ಈ ದಿವಸ ಕ್ರೋಢೀಕರಿಸಿ ದೇಶದಲ್ಲಿ ಒಂದು ಪಕ್ಷಾತೀತ ಸರ್ಕಾರವನ್ನು ರಚಿಸಬೇಕೆಂದು ಈಗ ಈ ನಿರ್ಣಯದಲ್ಲಿ ಹೇಳಿದೆ. ನಾವು ಕೆಲವು ದಿನಗಳ ಹಿಂದೆ ತಂದಿದ್ದ ಅವಿಶ್ವಾಸ ನಿರ್ಣಯದ ಉದ್ದೇಶವೂ ಕೂಡ ಇದೇ ಆಗಿತ್ತು. ಆಡಳಿತ ಪಕ್ಷದಲ್ಲಿ ಈ ದಿವಸ ಬಿಸಿ ರಕ್ತವಿರತಕ್ಕ ಜನರಿಗೆಲ್ಲ. ಅವರೆಲ್ಲಾ 60-70 ವಯಸ್ಸನ್ನು ದಾಟಿದ್ದಾರೆ. ಅವರಲ್ಲಿ ತರುಣರಿರುವುದು ಬಹಳ ಕಡಮೆ. ನಮ್ಮ ಪಕ್ಷದಲ್ಲಿ ನ್ಯೂರ್ತಿಯರತಕ್ಕವರೂ, ಬಿಸಿರಕ್ತ ವಿರತಕ್ಕವರೂ ದೇಶದ ವಿಶ್ವಾಸವನ್ನು ಹೆಚ್ಚಿಗೆ ಗಳಿಸಿರತಕ್ಕವರೂ ಬಹಳವಾಗಿದ್ದಾರೆ. ಈ ದಿವಸ ಆಡಳಿತ ಪಕ್ಷದಲ್ಲಿ ಅಧಿಕಾರವನ್ನು ದಕ್ಷತೆಯಿಂದ ಚಲಾಯಿಸುವಂಥ ಜನರಿಲ್ಲ. ಜನರ ವಿಶ್ವಾಸವನ್ನು ಇಮ್ಮಡಿಗೊಳಿಸುವಂಥ ಜನರು ಇರಬೇಕು. ಈ ಕಾರಣಗಳಿಂದ ಆಡಳಿತ ಪಕ್ಷಕ್ಕೆ ಹೆಚ್ಚಿನ ಸಾಮರ್ಥ್ಯದಿಂದ ಮತ್ತು ಜವಾಬ್ದಾರಿಯಿಂದ ಕೆಲಸಗಳನ್ನು ಮಾಡಲು ಆಗುತ್ತಿಲ್ಲವೆಂದು ಕಾಣುತ್ತಿದೆ. ಆಳುವ ಪಕ್ಷದವರು ಈ ರೀತಿ ಪಕ್ಷ ಪಂಗಡಗಳನ್ನುಂಟು

ಮಾಡಿಕೊಂಡು ರಾಜಕೀಯ ಮಾಡುತ್ತಿರುವುದರಿಂದ ಜನಕ್ಕೆ ಅನುಕೂಲವಾಗುವುದಿಲ್ಲ. ಅದರಿಂದಾಗಿ ಇಲ್ಲಿಯೂ ಎಲ್ಲ ಪಕ್ಷಗಳನ್ನೊಳಗೊಂಡ ಸಮ್ಮಿಶ್ರ ಸರಕಾರ ಇರಬೇಕೆಂದು ಕೇಳಿಕೊಂಡು ನಾನು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

11-30 A.M.

†ಶ್ರೀ ವಿ. ಮುನಿಯಪ್ಪ (ಹಿರಿಯೂರು).—ಸ್ವಾಮೀ, ಮಾನ್ಯ ಸ್ನೇಹಿತರು ತಂದಿರುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುವುದಕ್ಕಾಗಿ ನಿಂತಿದ್ದೇನೆ.

ನಮ್ಮ ಮಾನ್ಯ ಸ್ನೇಹಿತರು ಈ ನಿರ್ಣಯವನ್ನು ಸಮರ್ಥಿಸುತ್ತ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲೂ ಬಹಳ ಪ್ರಧಾನವಾಗಿ ಕೇರಳ ಮತ್ತು ಓರಿಸ್ಸಾ ಸರಕಾರಗಳ ನಿದರ್ಶನಗಳನ್ನು ತೆಗೆದುಕೊಂಡು ಸಮರ್ಥಿಸುತ್ತಾ ಸರ್ವ ಪಕ್ಷಗಳನ್ನು ಒಳಗೊಂಡ ಸರಕಾರ ಬಹಳ ಅಗತ್ಯ, ಅನಿವಾರ್ಯ ಅದನ್ನು ಬಿಟ್ಟರೆ ದೇಶ ಉಳಿಯುವುದಿಲ್ಲ, ಸರಕಾರ ನಡೆಯುವುದಿಲ್ಲ, ಅಂತಹ ವಿಷಯ ಸನ್ನಿವೇಶಗಳು ಒದಗಿವೆ ಎನ್ನುವ ರೀತಿಯಲ್ಲಿ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇದರಲ್ಲಿ ಕಾನ್ಸ್‌ಟಿಟ್ಯೂಷನ್ನಿನ ಪ್ರಕಾರ ಆಗಲೀ, ಯಾವುದೇ ದೃಷ್ಟಿಯಿಂದ ಯೋಚನೆ ಮಾಡಲು, ಈ ಸರಕಾರವನ್ನು ರುಳಿಸಿ ಎಲ್ಲ ಪಕ್ಷಗಳನ್ನು ಒಳಗೊಂಡ ಸರಕಾರವನ್ನು ತರುತಕ್ಕ ಅವಶ್ಯಕತೆ ಯಾವ ಸಂದರ್ಭದಲ್ಲಿ ಬರುತ್ತದೆ. ಅಂತಹ ಸನ್ನಿವೇಶ ಸಂದರ್ಭ ಮೈಸೂರು ದೇಶದಲ್ಲಿದೆಯೆ ? ಎಂದರೆ, ಇಲ್ಲಿ Consitution break down ಆಗುತಕ್ಕ ಸನ್ನಿವೇಶವಿಲ್ಲ. ಎಲ್ಲ ಪಕ್ಷಗಳೂ ಸೇರಿಸಿಕೊಳ್ಳುವುದಕ್ಕೆ ಅಡಳಿತ ದುರ್ಬಲವಾಗಿವೆ ಎನ್ನುತಕ್ಕ ಸನ್ನಿವೇಶವೂ ಕಾಣುತ್ತಿಲ್ಲ. ದೇಶದಲ್ಲಿ ಚೀಣಾದ ಯುದ್ಧದಿಂದ ಉಂಟಾಗಿರತಕ್ಕ ವಾತಾವರಣವನ್ನು ಹೇಳಿದರು. ಅವರ ಸ್ವಲ್ಪ ಮಟ್ಟಿಗೆ ಯೋಚನೆ ಮಾಡ ಬೇಕಾಗಿತ್ತು. ಚೀಣ ಭಾರತದ ಮೇಲೆ ಮತ್ತೆ ದಾಳಿ ಮಾಡತಕ್ಕ ಸನ್ನಿವೇಶ ಇರುವಂತೆ ಕಾಣುತ್ತಿಲ್ಲ, ಏಕೆಂದರೆ ಅವರುಗಳೇ ಅಂತ ಯುದ್ಧ ನಡೆಯುತ್ತದೆ. ಈ ಕಡೆ ಫಾರ್ಮೋಸಾ ಒಂದು ಕಡೆ ಚಿಯಾಂಗ್ ಕೈಷೇಕ್ ಇವರುಗಳ ಕಾಟ ಬೇರೆ, ಷುರುವಾಗಿದೆ. ಕಮ್ಯೂನಿಸ್ಟು ಚೀನಾ ಇನ್ನೂ ಇಂಡಿಯಾದ ಮೇಲೆ ಇಂತಹ ಸ್ಥಿತಿಯಲ್ಲಿ ದಾಳಿ ಮಾಡಬಾರದೇನು ? ಹೀಗೆ ಇಂತಹ ಸನ್ನಿವೇಶವನು ನೋಡಿದರೆ ಅದರಿಂದ ಭಾರತಕ್ಕಾಗಲೀ, ಮೈಸೂರಿಗಾಗಲೀ ಖಂಡಿತವಾಗಿಯೂ ಯಾವ ಭಯವೂ ಇಲ್ಲ ಎನ್ನುವುದನ್ನು ತಿಳಿದುಕೊಳ್ಳ ಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯುದ್ಧದ ಭಯವಿಲ್ಲದ ಮೇಲೆ ತುರ್ತಿನ ಪರಿಸ್ಥಿತಿ ಏಕಿರ ಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ವಿ. ಮುನಿಯಪ್ಪ.—ಅಲ್ಲದೆ ಇಲ್ಲಿ ಸಾಕಷ್ಟು ಮೆಜಾರಿಟಿಯಲ್ಲಿರುವ ಪಕ್ಷವಿದೆಯೇ ಎಂದರೆ ಆ ಸ್ಥಿತಿಯೂ ಇಲ್ಲ. ದೇಶದಲ್ಲಿ ಅಲ್ಲೋಲಕಲ್ಲೋಲವಾಗಿ ಅನ್ಯಾಯ ಅಧರ್ಮಗಳು ಹೆಚ್ಚು ಹೆಚ್ಚಾಗಿವೆ ಎಂದು ಹೇಳುವಂತೆಯೂ ಇಲ್ಲ ಏಕೆಂದರೆ, ಸುವ್ಯವಸ್ಥಿತವಾದ ಆಡಳಿತ ಇದೆ. ಅಲ್ಲದೆ ರಾಜ್ಯಾಂಡ್ ಆಡ್ರರು Break down ಆಗಿದೆಯೇ ಎಂದರೆ ಅದೂ ಆಗಿಲ್ಲ. ಅದಕ್ಕೆ ಸುವ್ಯವಸ್ಥಿತವಾದ ಆಡಳಿತವಿದೆ ಆ ಮೂಲಕ ಹೋರಗಿನ ಭೀತಿಯೂ ಇಲ್ಲ ಮತ್ತು ಅಂತಹ ಒಂದ ಸನ್ನಿವೇಶವೂ ಇಲ್ಲದಿರುವಾಗ ನರ್ವ ಪಕ್ಷದ ಆಡಳಿತ ಈ ದೇಶಕ್ಕೆ ಅವಶ್ಯಕ ಎಂದು ನಮ್ಮ ಸ್ನೇಹಿತರ ತಲೆಯಲ್ಲಿ ಏಕೆ ಹೊಳೆಯಿತು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಅವರು ಕೇರಳದ ನಿದರ್ಶನವನ್ನು ಹೇಳಿದರು.

Sri V. S. PATIL (Belgaum I).—On a point of order. In our country the Central Government have declared an emergency. That emergency. is still in force, it has not been withdrawn. So long as that order of emergency is not withdrawn, is it whithin the competence of any member of this House to say that there is no fear from China, no fear from Communist countries or from any outsider ? Can this allegation be made on the floor of this House by any member who is representing the people, as against the present orders of the Central Government regarding the emergency ?

Mr. CHAIRMAN.—The Hon'ble Member is not making a policy speech. He is opposing the resolution.

ಶ್ರೀ ವಿ. ಮುನಿಯಪ್ಪ.—ಸ್ವಾಮೀ, ನಮ್ಮ ಮಾನ್ಯ ಸ್ನೇಹಿತರು ನಾನು ಹೇಳುವ ಮಾತುಗಳ ಪೂರ್ಣ ಅರ್ಥವನ್ನು ಮಾಡಿಕೊಳ್ಳಬೇಕೆಂದು ನಾನು ಇಲ್ಲಿ ಹೇಳಬೇಕಾಗಿದೆ. ಏಕೆಂದರೆ ಇಷ್ಟು

(ಶ್ರೀ ಎ. ಮಸಿಯಪ್ಪ)

ಕಾಲ ಎಮರ್ಜೆನ್ಸಿ ಇದ್ದುದ್ದು ಇನ್ನು ಮುಂದೆಯೂ ಇರುತ್ತದೆಯೇ ಎನ್ನುವುದನ್ನು ಸ್ಪಲ್ಪ ಯೋಚನೆ ಮಾಡಬೇಕಾಗಿದೆ. ತೀವ್ರತರವಾದ ಪರಿಸ್ಥಿತಿ ಚೀನದಲ್ಲಿ ತಲೆದೋರಿರುವುದರಿಂದ ಅಲ್ಲಿನ ಆಡಳಿತ ನಡೆಸತಕ್ಕ ಕೆಲಸಗಾರರು ಮಮ್ಮಲ ಗುಂಡು ಇಲ್ಲವೇ ಇರತಕ್ಕ ಒಂದು ವಾತಾವರಣವನ್ನು ಕಲ್ಪಿಸಿರುವುದರಿಂದ ಭಾರತಕ್ಕೆ ತೊಂದರೆ ಕಡಿಮೆ ಆಗುತ್ತಿದೆ. ಇದನ್ನು ಇಲ್ಲಿ ಸ್ಪಲ್ಪ ಯೋಚನೆ ಮಾಡಬೇಕಾಗಿದೆ ಕೇಂದ್ರ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು. ಕೇರಳ ಸರಕಾರದಲ್ಲಿ ಸಮ್ಮಿಶ್ರ ಸರಕಾರ ಬಹಳ ಒಳ್ಳೆಯದನ್ನು ಮಾಡಿತು ಎನ್ನುವುದನ್ನು ತೆಗೆದುಕೊಂಡು ಮಾತನಾಡಿದರು. ಕೇರಳದಲ್ಲಿ ಒಂದು ಕಾಲದಲ್ಲಿ ಮುಖ್ಯಮಂತ್ರಿಗಳ ಸ್ಥಾನವನ್ನು ಪಡೆದು ಹೆಚ್ಚಿನ ಗೊಂದಲವನ್ನು ಮಾಡಿದ ಕಮ್ಯುನಿಸ್ಟ್ ಸರಕಾರ ಇತ್ತು. ಅಂತಹದೂ ಹೋಗಿ ಒಂದು ಬಾರಿ ಒಂದೇ ಪಕ್ಷದ ಸರಕಾರ ಬಂತು. ಆಗ ಕಮ್ಯುನಿಸ್ಟ್ ಪಕ್ಷದ ಮೇಲೆ ಚಾರ್ಜ್ ಮಾಡಿದ ಮೇಲೆ ಶ್ರೀಮಾನ್ ಪಟ್ಟಂಥಾನು ಪಿಳ್ಳೆಯವರು ಸರಕಾರ ರಚನೆ ಮಾಡಬೇಕೆಂದಾಗಿ ಆಗ ಕಮ್ಯುನಿಸ್ಟ್ ಪಾರ್ಟಿಯಿಲ್ಲದ ಸಮ್ಮಿಶ್ರ ಸರಕಾರವನ್ನು ಮಾಡಿದಾಗ ಅದು ಎಲ್ಲ ಪಕ್ಷಗಳನ್ನೂ ಸೇರಿಸಿದ ಪಕ್ಷಗಳ ಪಾರ್ಟಿ ಸರಕಾರ ಎಂದಾಗುತ್ತದೆ. ಎಂದು ಹಾಗೆ ಮಾಡಿದರು. ಅವರು ಹೇಳುವಂತೆ ಒಂದು ಪಕ್ಷದ ಸರಕಾರ ತೆಗೆದು ಹಾಕಿ ಪಕ್ಷೇತರ ಅಥವಾ ಸಮ್ಮಿಶ್ರ ಸರಕಾರ ಸ್ಥಾಪನೆ ಮಾಡಬೇಕಾದ ಸನ್ನಿವೇಶಗಳು ಏನೂ ಇಲ್ಲಿಲ್ಲ. ಹಾಗಿರುವಾಗ ಕೆಲವು ಕಾಲಪರ್ಯಂತ ಸರ್ವ ಪಕ್ಷಗಳಿಗೂ ಸೇರಿದ ಸರಕಾರವನ್ನು ರಚಿಸಿ ಅದನ್ನು ಸರ್ವ ಪಕ್ಷ ಸರಕಾರ ಎಂದು ಕರೆಯುವ ಪರಿಸ್ಥಿತಿ ಉಂಟಾಗಿ ಅಂತಹ ಸರಕಾರ ರಚನೆ ಮಾಡುವಂತಹ ಸನ್ನಿವೇಶಗಳು ಇಲ್ಲಲ್ಲ. ಎಲ್ಲೂ ಇಲ್ಲವೇ ಇರುವಂತಹ ಸನ್ನಿವೇಶಗಳನ್ನು ತಮ್ಮೊಳಗೇ ಚಿತ್ರಿಸಿಕೊಂಡು ಮಾತನಾಡುವ ಅವಶ್ಯಕತೆಯೂ ಇಲ್ಲ. ಆದ್ದರಿಂದ ಈ ಆಧಾರದ ಮೇಲೆ ಇಲ್ಲಿ ಮಂಡಿಸಿರುವ ನಿರ್ಣಯ ಸಾಧುವೂ ಅಲ್ಲ ಎಂದು ನಾನು ಹೇಳುತ್ತೇನೆ. ನಮ್ಮ ವಿರೋಧ ಪಕ್ಷವನ್ನು ಆಡಳಿತ ಪಕ್ಷದವರು ಟೀಕಿಸುತ್ತ ಹಾಗೆಲ್ಲ ಹೇಳಿದರು. ಆಡಳಿತವನ್ನು ನಮ್ಮ ಮುಖ್ಯಮಂತ್ರಿಗಳು ಚೆನ್ನಾಗಿ ನಡೆಸುತ್ತಿದ್ದಾರೆ. ನೀವು ನೋಡುವ ದೃಷ್ಟಿಯೇ ಬೇರೆ ನನಗನಿಸುವುದೇನೆಂದರೆ ವಿರೋಧ ಪಕ್ಷದವರು ಯಾವುದನ್ನು ನೋಡಲಿ ಅವರ ನೋಪೇ ಒಂದು ದೃಷ್ಟಿ ದೋಷದಿಂದ ಕೂಡಿದ್ದಾಗಿರುತ್ತದೆ ಎಂದು ಹೇಳಬಹುದು. ಆಡಳಿತ ಪಕ್ಷ ಒಳ್ಳೆಯದನ್ನು ಮಾಡಿದರೂ ಅವನ್ನು ವಿರೋಧ ಪಕ್ಷ ಹಾಗೆ ಕೇಳುವುದಿಲ್ಲ ಒಂದು ಪಕ್ಷಕ್ಕೆ ಬರಿದೆ ಮುಖ್ಯಮಂತ್ರಿಗಳು ಮಂತ್ರಿಮಂಡಲ ರಚಿಸಿಕೊಂಡು ದೇಶದ ಹಿತದೃಷ್ಟಿಯಿಂದ ಆಡಳಿತವನ್ನು ದೃಢತೆಯಿಂದ ಧೈರ್ಯದಿಂದ ನೋಡಿಕೊಳ್ಳುವುದಕ್ಕೆ ಸಾಧ್ಯ. ಆದರೆ ವಿರೋಧ ಪಕ್ಷದ ದೃಷ್ಟಿಯಂತೆ ಸರಕಾರ ರಚಿಸಿ ಆಡಳಿತ ನೋಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ನಾವು ಕಾಂಗ್ರೆಸ್ಸಿನವರು ಆರಿಸಿ ಬರುವಾಗ ವಿರೋಧ ಪಕ್ಷದವರನ್ನು ಉದ್ಧಾರ ಮಾಡುತ್ತೇವೆ, ಅವರ ಪಕ್ಷಕ್ಕೆ ಸಹಾಯ ಮಾಡುತ್ತೇವೆ, ಆದ್ದರಿಂದ ಜನತೆಯನ್ನು ಕೇಳಲಿಲ್ಲ. ಹಾಗೆಯೇ ವಿರೋಧ ಪಕ್ಷದವರು ಬಂದಾಗ, ನಮ್ಮ ಮಾನ್ಯ ಸ್ನೇಹಿತರು ಕಾಂಗ್ರೆಸ್ಸಿನವರನ್ನು ಉದ್ಧಾರ ಮಾಡತ್ತೇವೆ, ಕಾಂಗ್ರೆಸ್ಸನ್ನು ಬಲಪಡಿಸುತ್ತೇವೆಂದು ಹೇಳಿ ಓಟು ತಗೆದುಕೊಂಡು ಬರುವಲ್ಲ ಅವರು ತಪ್ಪಿಯೂ ವಿರತಕ್ಕಂಥವ್ದು, ನಮ್ಮ ಸರಕಾರವನ್ನು ಟೀಕೆ ಮಾಡಿ, ಸರಕಾರದ್ಲಿರತಕ್ಕಂತ ಲೋಪ ದೋಷಗಳನ್ನು ತೋರಿಸಿಕೊಟ್ಟು ಜನರ ಹಿತದೃಷ್ಟಿಯಿಂದ ದೇಶದ ಕಲ್ಯಾಣಕ್ಕೋಸ್ಕರ, ಜನಜೀವನ ಮಟ್ಟವನ್ನು ಉತ್ತಮ ಪಡಿಸುವುದಕ್ಕೆ, ದೇಶದಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ಆಗುತ್ತವೆ. ನಾವೂ ಇಂಥಿಂಥ ಕೆಲಸವನ್ನು ಸರಕಾರ ಮಾಡಿರಿ ಎಂದು ಹೇಳುತ್ತೇವೆ. ಸ್ವಾಭಾವಿಕವಾಗಿ ನಾವು ಮಾಡತಕ್ಕಂತ ಒಳ್ಳೆಯ ಕೆಲಸದಿಂದ ಒಳ್ಳೆಯ ಹೆಸರು ಬರುತ್ತದೆ; ಕಾಂಗ್ರೆಸ್ಸಿಗೂ ಒಳ್ಳೆಯ ಹೆಸರು ಬರಿಸುತ್ತದೆ. ವಿರೋಧ ಪಕ್ಷದವರೂ ಒಳ್ಳೆಯ ಕೆಲಸ ಮಾಡಿದರೆ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಒಳ್ಳೆಯ ಕೆಲಸವನ್ನು ಮಾಡಿದಾಗ ಒಳ್ಳೆಯ ಹೆಸರು ಪ್ರಾಸಂಗಿಕವಾಗಿ ಪಕ್ಷಕ್ಕೆ ಬಂದರೆ, ನಾವು ನಮ್ಮ ನಮ್ಮ ಪಕ್ಷವನ್ನು ಬೆಳೆಸಿಕೊಳ್ಳುತ್ತೇವೆಂದು ಆ ರೀತಿ ಮಾಡುತ್ತೇವೆಂದು ಭಾವನೆ ಇಟ್ಟುಕೊಂಡು, ನಾವು ಮಾಡತಕ್ಕಂಥ ಪ್ರತಿಯೊಂದು ಕೆಲಸವನ್ನು ಪಕ್ಷ ಬೆಳೆಸುವ ಒಂದೇ ಉದ್ದೇಶದಿಂದ ಮಾಡಿದ್ದಾರೆಂದು ಟೀಕೆ ಮಾಡುವುದು ಸರ್ವಥಾ ತಪ್ಪು ಎಂದು ನಾನು ಹೇಳುತ್ತೇನೆ. ಒಳ್ಳೆಯ ಕೆಲಸವನ್ನು ಮಾಡಿದಾಗ ಬೇಕಾಗಿ ಇರಲಿ, ಇಲ್ಲದೆ ಇರಲಿ, ಒಳ್ಳೆಯ ಹೆಸರು ಬಂದೇ ಬರುತ್ತದೆ; ಅದಕ್ಕೆ ಅನುಮಾನ ಪಡಬಾರದು. ದೇಶದಲ್ಲಿ ಒಂದು ಕೆರೆ ಕಟ್ಟಿಸಿದರೆ, ಸಂತೆ ಮಾಡಿದರೆ, ರಸ್ತೆ ಮಾಡಿಸಿದರೆ, ಸ್ಕೂಲು ಕಟ್ಟಿಸಿದರೆ, ಒಳ್ಳೆಯ ಹೆಸರು ಬಂದರೆ, ಆ ಒಳ್ಳೆಯ ಹೆಸರು ಕಾಂಗ್ರೆಸ್ ಪಕ್ಷಕ್ಕೆ ಅನಿವಾರ್ಯವಾಗಿ ಬಂದೇ ಬರುತ್ತದೆ. ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡತ್ತಾ ಶ್ರೀಮಾನ್ ಬಸಪ್ಪನವರು ಎತ್ತಿ ಹೇಳಿದ ಹಾಗೆ ಸಂಶಯ ಪಡುವವರ ವಿನಾಶ ಖಂಡಿತ. ಎಲ್ಲಿಯವರೆಗೆ ಇತರರನ್ನು ಸಂಶಯದಿಂದ ನೋಡುತ್ತಾರೆಯೋ, ಎಲ್ಲಿಯವರೆಗೆ ಕಾಂಗ್ರೆಸ್ಸಿನವರು ತಮ್ಮ ಪಕ್ಷ ಬೆಳೆಯಲ ಎಂಬ ದೃಷ್ಟಿಯಿಂದ

ಕೆಲಸಗಳನ್ನು ಮಾಡುತ್ತಿದ್ದಾರೆ, ತಮ್ಮ ಪಕ್ಷದ ಬೆಂಬಲಿಗರಿಗೇ ಸಹಾಯ ಮಾಡುವುದಕ್ಕೆ ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆಂದು ಅನಾವಶ್ಯಕವಾಗಿ ಸಂದೇಹ ಪಡುವುದಾದರೆ, ಅಲ್ಲಿಯವರೆಗೂ ವಿರೋಧ ಪಕ್ಷಕ್ಕೆ ಪ್ರೋತ್ಸಾಹ ಸಿಕ್ಕುವುದಿಲ್ಲ.

ಇನ್ನು ಕೆಲವು ವಿರೋಧಪಕ್ಷದ ನಮ್ಮ ಸ್ನೇಹಿತರು, ಕಾಂಗ್ರೆಸ್‌ಪಕ್ಷದ ಸದಸ್ಯರು ಗಾದೆಗಳನ್ನೂ ಲೋಕೋಕ್ತಿಗಳನ್ನೂ ಕೊಟ್ಟದ್ದಕ್ಕೆ ಬಹಳ ದೊಡ್ಡ ವ್ಯಾಖ್ಯಾನ ಮಾಡಿದರು. ಸಾಧಾರಣವಾಗಿ ಒಂದು ವಿಷಯವನ್ನು ಇನ್ನೊಬ್ಬರ ಮನಸ್ಸಿಗೆ ನಾಟುವಂತೆ ಹೇಳುವಾಗ, ಅದು ಚೆನ್ನಾಗಿ ಅರ್ಥ ವಾಗುವಂತೆ ರಸಭಾವದಿಂದ ಒತ್ತಿ ಹೇಳುವಾಗ, ಚರ್ಚೆ ನೀರಸವಾದಾಗ ಸ್ವಲ್ಪ ಜಡ್ಡು ಕಡಿಮೆ ಯಾಗಲಿ ಎನ್ನುವ ದೃಷ್ಟಿಯಿಂದ ಆಗಾಗ್ಗೆ ಉದಾಹರಣೆಗಳನ್ನು ಕೊಟ್ಟು, ಗಾದೆಗಳ ದೃಷ್ಟಾಂತ ಕೊಟ್ಟು ಚರ್ಚೆಯನ್ನು ಉಲ್ಲಾಸಗೊಳಿಸುವುದು ವಾಡಿಕೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜಡ್ಡು ಎಂದರೇನು?

ಶ್ರೀ ವಿ. ಮಸಿಯಪ್ಪ.—ಜಡ್ಡು ಅಂದರೆ ಲೆತಾರ್ಜಿ ಎಂದು ಹೇಳುತ್ತಾರೆ. ಮನಸ್ಸಿನಲ್ಲಿರ ತಕ್ಕಂಥ ಬೇಸರವನ್ನು ಹೋಗಲಾಡಿಸಿ, ಚರ್ಚೆಯನ್ನು ಲೈವಲ ಮಾಡುವುದಕ್ಕೆ ನೀತಿ ಕತೆಗಳನ್ನು ಹೇಳುತ್ತಾರೆ, ವಿಷಯ ಚೆನ್ನಾಗಿ ಗ್ರಹಣ ಆಗಲಿ ಎಂದು ಉಪಮೆ ಕೊಟ್ಟು, ಗಾದೆಗಳನ್ನು ಹೇಳಿದ, ಅದನ್ನೇ ಒಂದು ದೊಡ್ಡ subject matter of debate ಆಗಿ ಮಾತನಾಡಿದರೆ ಯಾವ ಪಕ್ಷವೂ ಏಳಿಗೆಗೆ ಬರಲಾರದೆಂದು ಹೇಳಬೇಕಾಗಿಲ್ಲ.

ನಮ್ಮ ಸ್ನೇಹಿತರೊಬ್ಬರು ಮಂತ್ರಿಮಂಡಲ ರಚನೆಯಾಗತಕ್ಕಂಥ ಕಾಲದಲ್ಲಿ ಯಾರೋ 45 ಜನ ತಮ್ಮನ್ನೂ ಸೇರಿಸಿಕೊಳ್ಳಿ ಎಂದು ಮಾಡಲಾದ ಪ್ರಯತ್ನವನ್ನು ಬಹಳ ದೊಡ್ಡದು ಮಾಡಿ ಹೇಳಿ ದರು. ಅವರು ಮನಶ್ಶಾಸ್ತ್ರ ಅರಿತು ಮಾತನಾಡಿದರೋ ಅಥವಾ ಅದೇ ಮನಶ್ಶಾಸ್ತ್ರ ತಮಗೂ ಅನ್ವಯಿಸುತ್ತದೆ ಎಂದು ತಿಳಿದುಕೊಳ್ಳದೆ ಮಾತನಾಡಿದರೋ ನನಗೆ ಅರ್ಥವಾಗಲಿಲ್ಲ. ಒಂದು ಗಣ್ಯ ಸ್ಥಾನವನ್ನು ಅಪೇಕ್ಷೆ ಮಾಡಿದಾಗ, ಅವರವರ ಅರ್ಹತೆ, ಗುಣಗಳನ್ನು ಪ್ರದರ್ಶನ ಮಾಡಿ ಕೊಳ್ಳತಕ್ಕಂಥಾದ್ದು ಕರ್ತವ್ಯ; ಎಲ್ಲರೂ ಮಾಡಿಕೊಳ್ಳುತ್ತಾರೆ. ಅಂತಹುದರಲ್ಲಿ ಕಾಂಗ್ರೆಸ್ಸಿನವರೂ, ಕಾಂಗ್ರೆಸ್ ಮಂತ್ರಿಮಂಡಲ ರಚನೆಯಾಗುವಾಗ, ಮುಖ್ಯಮಂತ್ರಿಗಳಲ್ಲಿ ಹೋಗಿ ತಮಗೆ ಆದರಲ್ಲಿ ಒಂದು ಸ್ಥಾನ ಕೊಡಿ ಎಂದು ಕೇಳಿಕೊಳ್ಳುವುದರಲ್ಲಿ ಮಹತ್ವವೇನು; ಬೇರೆಯವರು ಎರೆಡೆಕ್ಷ್ ಸಂದರ್ಭದಲ್ಲಿ ನಮ್ಮ ಪಕ್ಷಕ್ಕೆ ಸೇರುತ್ತೀವೆ, ಚುನಾವಣೆಗೆ ನಿಲ್ಲಲು ಕಾಂಗ್ರೆಸ್ ಸೀಟ್ ಕೊಡಿ ಎಂದು ಕೇಳಬಹುದಂತೆ; ಅಂತಹುದರಲ್ಲಿ ಕಾಂಗ್ರೆಸ್ಸಿನವರು ಮುಖ್ಯಮಂತ್ರಿಗಳಲ್ಲಿ ತಮ್ಮನ್ನು ಅವರ ಮಂತ್ರಿಮಂಡಳದಲ್ಲಿ ತೆಗೆದುಕೊಳ್ಳಿ ಎಂದು ಕೇಳಿಕೊಂಡರೆ ಪಾಪವೇ

ಇನ್ನೂ ಮಾನ್ಯ ಸೋದರರೊಬ್ಬರು ಈ ಕಮಿಟಿಗಳ ಚೇರ್ಮನ್‌ಶಿಪ್ ಪ್ರಶ್ನೆ ಎತ್ತಿ ಟೀಕೆ ಮಾಡಿದ ರಲ್ಲಾ ಅದಕ್ಕೆ ನಾನು ವಿಷಾದ ಪಡಬೇಕಾಗಿದೆ. ಇಷ್ಟು ಸಣ್ಣದಾದಂಥ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರಲ್ಲಾ ಎಂದು ನಾವೂ ಹೇಳಬೇಕಾಗಿದೆ ವೈಸೂರು ರಾಜಕೀಯ ಎಲ್ಲರಿಗೂ ಗೊತ್ತಿದೆ. ಇವತ್ತೂ ನಿಮ್ಮ ಪಕ್ಷಗಳಲ್ಲಿ ಏನೇನು ನಡೆಯುತ್ತಿದೆ, ನಿಮ್ಮಲ್ಲಿ ವ್ಯಕ್ತಿ ವ್ಯಕ್ತಿಗಳೊ ಳಗೆ ಏನು ಸಾಮರಸ್ಯವಿದೆ ಎನ್ನುವುದು ನಮಗೂ ಗೊತ್ತಿದೆ. It is an open book and anybody can read every page and every line in it. ಇವತ್ತು ಇನ್ನೂ ನಿಮಗೆ ಸಾಕಷ್ಟು ವೆ ಜಾರಿಟಿ ಇಲ್ಲ ಇನ್ನೂ ನಿನು ಬಂದರೂ ನೀವು ಅಧಿಕಾರಕ್ಕೆ ಬರುವ ಹಾಗಿಲ್ಲ. ಕೇವಲ ಅಲ್ಲಿ ಇಲ್ಲಿ ವಿಧಾನಸಭೆಯಲ್ಲಿ ರಚಿಸಿ ಮಾಡತಕ್ಕಂಥ ಸಮಿತಿಗಳಿಗೆ (ಸೆಲೆಕ್ಟ್ ಕಮಿಟಿಗಳಿಗೆ ಅಥವಾ ಇನ್ನಾವುವಾದರೂ ಕಮಿಟಿಗಳಿಗೆ) ಹೆಸರನ್ನು ಸೂಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಿಮ್ಮ ಪಾರ್ಟಿ ಎ್ಟಿಂಗಿನಲ್ಲಿ ಏನೇನು ಅವಾಂತರಗಳು ನಡೆದಿವೆ, ಏನೇನು ವ್ಯವಹಾರಗಳಲ್ಲಿ ಹೇಗೆ ವರ್ತಿ ಸಿದ್ದಾರೆಂದು ನಮಗೂ ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಶ್ರೀಮತಿ ನಾಗರತ್ನಮ್ಮನವರ ಭಾಷಣವನ್ನು ಕೋಟ್ ಮಾಡಿದರು. ಹಳೆಯ ವಿಷಯಗಳನ್ನು ಹೇಳುತ್ತಿ ದ್ದಾರೆ ಹೊಸ ವಿಷಯವನ್ನು ಹೇಳುವುದಾದರೆ ನಮ್ಮ ಅಬ್‌ಜೆಕ್ಷನ್ ಇಲ್ಲ. ಸಭೆಯ ಮುಂದಿ ರುವ ವಿಷಯದ ಮೇಲೆ ಮಾತನಾಡಬೇಕು.

ಸಭಾಪತಿಯವರು.—ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲ.

ಶ್ರೀ ವಿ. ಮಸಿಯಪ್ಪ.—ಮಾನ್ಯ ಸದಸ್ಯರಿಗೆ ನನ್ನ ಭಾಷಣ ಅರ್ಥವಾಗಲಿಲ್ಲ, ಬರೀ ವಿಷಯದ ಮೇಲೆ ಮಾತನಾಡತಕ್ಕಂಥಾದ್ದು ಒಂದೇ ಅಲ್ಲ. ಈ ಸಭೆಯಲ್ಲಿ ಮಾನ್ಯ ಸ್ನೇಹಿತರು ಮಾತನಾಡಿ ದಂಥ ವಿಷಯಗಳಿಗೆ ಜವಾಬು ಕೊಡತಕ್ಕಂಥಾದ್ದು ನಮ್ಮ ಕರ್ತವ್ಯ. ನೀವು ನಮ್ಮ ಮೇಲೆ ಏನೇನು ಅಂದಿದ್ದಿರೋ, ಅವಗಳಿಗೆ ಸರಿಯಾದ ಜವಾಬು ಕೊಡದಿದ್ದರೆ, ನಮ್ಮ ಕರ್ತವ್ಯ ನಿರ್ವಹಣೆ ಮಾಡಿದ ಹಾಗೆ ಆಗುವುದಿಲ್ಲ.

(ಶ್ರೀ ವಿ. ಮುನಿಯಪ್ಪ)

ಈಗ ನಿರ್ಣಯದ ವಿಷಯದಲ್ಲಿ ಹೇಳುವುದಾದರೆ, ನಾನು ಮೊದಲೇ ಹೇಳಿದ ಹಾಗೆ ಒಂದು ಸರ್ವಪಕ್ಷ ರಾಜಕೀಯ ಆಡಳಿತವನ್ನು ತರಲು ಯಾವ ಒಂದು ವಾತಾವರಣ ಕೂಡ ನಮ್ಮ ಮೈಸೂರು ರಾಜ್ಯದಲ್ಲಿಲ್ಲ. ಅನ್ನತಕ್ಕಂಥ ದ್ದು ನಿರ್ವಿವಾದ. ಅದೂ ಅಲ್ಲದೆ ಇವತ್ತು ಅನೇಕ ಜನ ಹೇಳುವುದನ್ನು ನಾವು ಕೇಳಿದ್ದೇವೆ. ಕಾಂಗ್ರೆಸ್ ಪಕ್ಷ ಆಡಳಿತ ನಡೆಸಿಕೊಂಡು ಹೋಗುತ್ತಾ ಇರುವುದರಿಂದ ದೇಶ ನೆಮ್ಮದಿಯಾಗಿದೆ. ಏಕೆಂದರೆ ಇದು ಸುಖ ಕಷ್ಟ ಎಲ್ಲವನ್ನು ಕಂಡಿರತ ಕ್ಕಂಥಾದ್ದು. ಜನತೆಯ ಕಷ್ಟವನ್ನು ನೋಡಿ ಮರುಕಗೊಂಡಿವೆ. ಪ್ರಜಾಪ್ರಭುತ್ವ ಇದರ ಒಂದು ಮುಖ್ಯವಾದ ತತ್ವ. ಪ್ರತಿಯೊಬ್ಬ ಸದಸ್ಯನೂ ಒಂದು ಕ್ಷೇತ್ರದಿಂದ ಆರಿಸಿ ಏನೋ ಬರುತ್ತಾನೆ. ಆರಿಸಿ ಬರುವವರೆಗೆ ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಾನೆ ಆರಿಸಿ ಬಂದ ಮೇಲೆ ಇಡೀ ಸ್ಟೇಟಿನ ಹಿತ ನಮಗೆ ಇರಬೇಕು ಪ್ರಜಾಪ್ರಭುತ್ವ ನಿಯಮದಂತೆ ನಾವು ಒಂದು ಪಕ್ಷದ ತತ್ವವನ್ನು ಹಿಡಿದು, ಚುನಾಯಿತರಾಗಿ, ಸ್ಥಾನಕ್ಕೆ ಬರುತ್ತೇವೆ. ಆಡಳಿತದ ಒಂದು ಜವಾಬ್ದಾರಿಗೆ ಬಂದ ಮೇಲೆ ನಮ್ಮೆಲ್ಲರ ಕರ್ತವ್ಯ ಇಡೀ ದೇಶದ ಆಡಳಿತ ನಡೆಸುವುದು. ಇದು ಪಿಜ್ಞಾನದ ನ್ಯಾಯ ಅದರಲ್ಲಿ From known to the unknown ಎಂದು ಹೇಳುತ್ತಾರೆಯೋ ಕಂಡದ್ದರಿಂದ ಸಂಶೋಧನೆ ಮಾಡಿ, ಕಂಡಿರದೆ ಇರತಕ್ಕಂಥಾದ್ದನ್ನು ಲೆಕ್ಕ ಹಾಕಿ, ಪಿಜ್ಞಾನಿಗಳು ಇನ್‌ಫರ್ ಮಾಡುತ್ತಾರೆ ಹಾಗೆಯೇ ಕಾಂಗ್ರೆಸ್ ಪಕ್ಷದಲ್ಲಿ ಕಂಡಿರತಕ್ಕಂಥಾದ್ದನ್ನು ನೋಡೋಣ, ಮೈಸೂರು ಸ್ಟೇಟಿನ ಲ್ಲಿಯೇ ಅಲ್ಲ, ಬೇರೆ ಸ್ಟೇಟುಗಳಲ್ಲಿಯೂ, principle of administration ಒಂದೇ. The principle of administration is the same whether it is the local body, or municipality or whether it is Co-operative institution or any other institution. ಲೋಕಲ್ ಬಾಡಿಗಳಲ್ಲೇ ಆಗಲಿ, ಕೋ-ಆಪರೇಟಿವ್ ಸಂಸ್ಥೆಗಳಲ್ಲೇ ಆಗಲಿ, ಹಿಂದೆ, ಇವತ್ತು, ಮುಂದೆ ವಿರೋಧ ಪಕ್ಷದ ಸ್ನೇಹಿತರುಗಳು ಜವಾಬ್ದಾರಿ ವಹಿಸಿಕೊಂಡು ನಡೆಸಿಕೊಂಡು ಬಂದಿರುವುದನ್ನು ವಿಮರ್ಶೆ ಮಾಡೋಣ ಕಿವಿಯಾರ ಕೇಳಿರುವ ನಿದರ್ಶನಗಳನ್ನು ಹೇಳಿದರೆ ಆಕ್ಷೇಪಣೆ ಮಾಡುತ್ತಾರೆ. ನಮ್ಮ ಪಕ್ಷದಲ್ಲಿ ಇಂಥವರಿಗೆ ಬೆಂಬಲ ಕೊಡಿ ಎಂದು ಅವರನ್ನು ಕೇಳುತ್ತೇವೆಂದು ಹೇಳಿದರು. ಅದು ನೂರಕ್ಕೆ ನೂರು ಅವರಿಗೇ ಅನ್ವಯಿಸತಕ್ಕಂಥಾದ್ದು. ನಮಗೆ ಅನ್ವಯಿಸುವುದಿಲ್ಲ, ಇಂಥ ವ್ಯಕ್ತಿಗೆ ಸಪೋರ್ಟ್ ಮಾಡಿ, ಸಹಾಯ ಮಾಡಿ ಎಂದು ಅವರ ಬಾಯಿಂದ ಕೇಳಿದಷ್ಟು ಕಾಂಗ್ರೆಸ್ಸಿನವರ ಬಾಯಿಯಿಂದ ಕೇಳುವುದಿಲ್ಲ. ಕಾಂಗ್ರೆಸ್ ಪಕ್ಷದವರು ಇಂಥಾದ್ದನ್ನು ಮಾತನಾಡಲು ಹಿಂದು ಮುಂದು ನೋಡುತ್ತಾರೆಂದು ಎದೆ ಮುಟ್ಟಿ ಹೇಳುತ್ತೇನೆ. ಕಾಂಗ್ರೆಸ್ ಪಕ್ಷದ ಆಡಳಿತ ಬಗ್ಗೆ ಯಾರೂ ಟೀಕೆ ಮಾಡಿಲ್ಲ. ಇದುವರೆಗೆ ಅನೇಕ ಆಕಾಂಕ್ಷೆಗಳನ್ನು ತೋರಿಸಿದ್ದಾರೆ. ಅವುಗಳನ್ನು ನೆರವೇರಿಸಿಲ್ಲ ಎಂದು ಹೇಳಬಹುದು. ಆದರೆ ವಿರೋಧ ಪಕ್ಷದವರಿಗೆ ಯಾವ ದೃಷ್ಟಿಯಿಂದಲೂ ಆಡಳಿತ ಟೀಕೆ ಮಾಡಲು ಅವರಿಗೆ ಇರುವ ಶಕ್ತಿ ಸಾಲದು. ಆದುದರಿಂದ ಈ ನಿರ್ಣಯ ಯಾವ ದೃಷ್ಟಿಯಿಂದಲೂ ಸಮರ್ಥನೀಯವಾಗಿಲ್ಲ. ಈ ಸಭೆಯಲ್ಲಿ ಕಂಡ ಅಂಥ ಸನ್ನಿವೇಶ ಒದಗಿಲ್ಲ. ಆದುದರಿಂದ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಇಷ್ಟೇ ಅಲ್ಲದೆ ಈ ಮಾನ್ಯ ಸಭೆಯೂ ಈ ನಿರ್ಣಯವನ್ನು ತಿರಸ್ಕರಿಸಬೇಕು ಎಂದು ನಾನು ಹೇಳುತ್ತೇನೆ.

Sri D. PARAMESWARAPPA (Honnali).—Sir, though the idea behind the proposition under discussion today is incompatible with the spirit of democracy, under certain circumstances it is called for. We will have to see whether a situation has arisen in the country to-day which warrants a coalition ministry. We are aware that a National Emergency has been declared consequent upon the Chinese aggression on the one hand and the Pakistani aggression on the other. The Government and the people of this country are called upon to face this two-pronged menace.

Sir, Indian politics has undergone so many phases hitherto. It is unfortunate that under this democratic set-up there should exist so many political parties. About 14 to 15 parties have been recognised, apart from many unrecognised parties. Everyone agrees that in a

democracy, there should be one organised Opposition to the party-in-power. The parties have different policies and even ideologies and therefore we have not been able to secure the required cohesiveness in the opposition parties. One of the speakers refered to Kerala, where the Congress and other parties united to overthrow the Communist Government. Judged from the Consitutional point of view, the existence of the Congress Government itself was most unconstitutional there.

[MR. SPEAKER in the Chair.]

Let us consider whether the situation in the country to-day is graver than it was when Communists were ousted in Kerala. Now we have to defend our country. Our Congress friends proclaim on platforms that there is great need for social, emotional and psychological integrity. But Congressmen are not prepared to do anything in practice which would bring about the desired integrity. That is the tragedy of the situation in the country to-day. There is such a wide gap between practice and precept among the members of the ruling party in the interest of the Nation and for bringing about homegenity, if the ruling party desires sincerely to secure the assistance of the other parties, the only way is to invite them to share in the governance of the country. The situation is ripe for such a coalition and our Congress friends should not treat the matter in a light-hearted manner. Now is the time for the formation of a popular, non-party Government, if we really want to face the enemy.

12-00 NOON.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ವೀರಭದ್ರಪ್ಪ ಈರಪ್ಪನವರು ತಂದಂಥ ಈ ಗೊತ್ತುವಳಿಯ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಅನೇಕ ಸದಸ್ಯರು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನೂ ವ್ಯಕ್ತ ಪಡಿಸಿದ್ದಾರೆ. ಪ್ರಜಾಪ್ರಭುತ್ವ ರಾಜ್ಯಪದ್ಧತಿಯಲ್ಲಿ ಸಕಲ ಪಕ್ಷಗಳ ಸರ್ಕಾರ ಅಥವಾ ಯಾವು ದೊಂದು ನಿರ್ದಿಷ್ಟ ಪಕ್ಷಕ್ಕೆ ಸೇರದಂಥ ಸರ್ಕಾರ ರಚನೆಗೆ ಬಹಳ ಅಪರೂಪವಾಗಿ ಒಂದೊಂದು ಸಲ ಅಂಥ ಅವಶ್ಯಕತೆಯುಂಟಾಗುವುದು ಕಂಡುಬರುತ್ತದೆ. ಎಂಥ ಸಂದರ್ಭದಲ್ಲಿ ಈ ಅವಶ್ಯಕತೆ ಹುಟ್ಟುತ್ತದೆಂದರೆ ಆಡಳಿತ ನಿರ್ವಹಿಸುತ್ತಿರುವ ಪಕ್ಷಕ್ಕೆ ಸಾಕಷ್ಟು ಸಂಖ್ಯಾಬಲವಿಲ್ಲದೆ, ಆಳಿತ ಸರಿಯಾಗಿ ನಡೆಯುವುದು ದುಸ್ತರವಾದಂಥ ಪ್ರಸಂಗದಲ್ಲಿ ಅದು ಬರುತ್ತದೆ. ಮತ್ತೊಂದು ಪ್ರಸಂಗದಲ್ಲಿಯೂ ಇಂಥ ಆವಶ್ಯಕತೆಯುಂಟಾಗಬಹುದು. ಅದು ಯಾವುದೆಂದರೆ ಇಡೀ ರಾಷ್ಟ್ರವೇ ಒಂದು ಗಂಡಾಂತರ ಪರಿಸ್ಥಿತಿಗೆ ಒಳಪಟ್ಟಾಗ. ಯುದ್ಧದ ಪ್ರಸಂಗದಲ್ಲಿ ಪ್ರಜಾಪ್ರಭುತ್ವವಿರುವಂಥ ರಾಷ್ಟ್ರಗಳಲ್ಲಿ ಸರ್ವ ಪಕ್ಷಗಳ ಸರ್ಕಾರ ಏರ್ಪಡುವಂಥಾದ್ದನ್ನು ನಾವು ನೋಡುಬಹುದು. ಮಾನ್ಯ ಸದಸ್ಯರು ತಮ್ಮ ಗೊತ್ತುವಳಿಯಲ್ಲಿ ಸಕಲ ಪಕ್ಷಗಳ ಸರ್ಕಾರ ಅಥವಾ ಸಂಯುಕ್ತ ಸರ್ಕಾರ ಎಂದು ಹೇಳಿಲಿಲ್ಲ. ಅವರು ತಂದಿರುವಂಥ ಗೊತ್ತುವಳಿ ಹೀಗಿದೆ :

> "This Assembly is of opinion that keeping in view the present national emergency, the present single party Government of the State be replaced by a popular non-party Government."

ಇದರಲ್ಲಿ ಎರಡು ವಿಚಾರವನ್ನು ಅವರು ಗ್ರಹಿಸಿಕೊಂಡಿದ್ದಾರೆ. ಈಗಿರುವಂಥ ಪಕ್ಷದ ಸರ್ಕಾರ ಯಾವುದಿದೆ ಆ ಸರ್ಕಾರ, ಆ ಪಕ್ಷ, popular ಅಲ್ಲ, ಜನಪ್ರಿಯವಲ್ಲ ಎನ್ನುವುದು ಮೊದಲನೆಯ ಗ್ರಹಿಕೆ. ಈ ಗ್ರಹಿಕೆ ಸರ್ವಥಾ ತಪ್ಪು. ಕಳೆದ ಚುನಾವಣೆಯಲ್ಲಿ ಯಾವ ಪಕ್ಷ ಎಷ್ಟು ಜನಪ್ರಿಯವಾದುದು ಎಂದು ಹೇಳುವಂಥಾದ್ದು ನಿಖರವಾಗಿ ಸಿದ್ಧವಾಗಿದೆ. ಆದುದರಿಂದ ಈಗ ಪುನಃ ಹೊಸ ಜನಪ್ರಿಯವಾದ ಮತ್ತೊಂದು ಪಕ್ಷವನ್ನು ಹುಡುಕುವಂಥ ಅಗತ್ಯವಿಲ್ಲ.

(ಶ್ರೀ ರಾಮಕೃಷ್ಣ ಹೆಗ್ಡೆ)

ಇನ್ನು ಎರಡನೆಯದು ಅವರು non-party Government ಬೇಕು ಎಂದು ಹೇಳಿದ್ದಾರೆ, ಎಂದರೆ ಯಾವ ಪಕ್ಷಕ್ಕೂ ಸೇರಿದಂಥ ಸರ್ಕಾರ ಎಂದು ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅದು ಹೇಗೆ ಸಾಧ್ಯ ಎಂದು ಹೇಳುವಂಥಾದ್ದು ಮಾತ್ರ ನನಗೆ ಇನ್ನೂ ಸ್ಪಷ್ಟವಾಗಿಲ್ಲ. ಆದುದರಿಂದ ಅಕಸ್ಮಾತ್ತಾಗಿ ಕೇವಲ ವಾದಕ್ಕಾಗಿ, argument ಗಾಗಿ, ತರ್ಕಕ್ಕಾಗಿ, ಒಂದು ದೃಷ್ಟಿ ನಾತ್ಮಕ್ಕೆ ಅವರು ತಂದಂಥ ಗೊತ್ತುವಳಿಯನ್ನು ಒಪ್ಪಿದ್ದೇ ಆದರೂ ಅವರು ಸೂಚಿಸಿದ proposition ಏನಿದೆ ಅದು ಅವ್ಯವಹಾರವಾದಂಥಾದ್ದು ಮತ್ತು ಅದನ್ನು ಜಾರಿಯಲ್ಲಿ ತರುವಂಥಾದೂ ಬಹಳ ಕಷ್ಟವಾದದ್ದು.

ಮಾನ್ಯ ಸದಸ್ಯರನೇಕರು ಸಂಯುಕ್ತರಂಗದಿಂದ ಸರ್ಕಾರ ನಡೆದಂಥ ಉದಾಹರಣೆಗಳನ್ನು ಉಲ್ಲೇಖಿಸಿದ್ದಾರೆ. ಎಲ್ಲಕ್ಕೂ ದೊಡ್ಡದಾದ ಉದಾಹರಣೆ ಎಂದರೆ ಎರಡನೆ ಮಹಾಯುದ್ಧ ನಡೆದಾಗ ಇಂಗ್ಲೆಂಡಿನಲ್ಲಿ ಸಂಯುಕ್ತ ಆಡಳಿತವಿತ್ತು. ರಾಷ್ಟ್ರ ಗಂಡಾಂತರದಲ್ಲಿತ್ತು. ಆ ಹೊತ್ತಿನಲ್ಲಿ ಆಡಳಿತ ಪಕ್ಷ ವಿರೋಧ ಪಕ್ಷ ಎಂದು ಭೇದ ಮಾಡದೆ ರಾಷ್ಟ್ರದ talents, ಶಕ್ತಿ, ಎಲ್ಲವನ್ನೂ, ಕ್ರೋಢೀಕರಿಸಿ ವೈರಿಗಳನ್ನು ಎದುರಿಸಬೇಕಾದ ಅಗತ್ಯವಿತ್ತು. ಅದಕ್ಕಾಗಿ ಆ ರೀತಿ ಮಾಡಿದ್ದರು. ನಮ್ಮಲ್ಲಿ ಆ ಪರಿಸ್ಥಿತಿ ಇವತ್ತು ಇಲ್ಲ. ಗಂಡಾಂತರ ಪರಿಸ್ಥಿತಿ, ಕಳೆದ ಅಕ್ಟೋಬರ್ ತಿಂಗಳಿನಿಂದ ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದವರು ಸಾರಿದ್ದಾರೆ. ಅದಕ್ಕೆ ಕಾರಣವೇನೆಂದು ಪ್ರತ್ಯೇಕವಾಗಿ ಹೇಳುವಂಥ ಅಗತ್ಯವಿಲ್ಲ. ಆದರೆ ಯಾವ ಪರಿಸ್ಥಿತಿಯನ್ನು ಇಂಗ್ಲೆಂಡ್ 1939ರಲ್ಲಿ ಎದುರಿಸಿತೋ ಅಂಥ ಪರಿಸ್ಥಿತಿ ಇವತ್ತು ನಮ್ಮ ದೇಶದಲ್ಲಿಲ್ಲ. ಆದುದರಿಂದ ಇಂದು ನಮ್ಮ ದೇಶಕ್ಕೆ ಆದರಲ್ಲಿಯೂ ನಮ್ಮ ರಾಜ್ಯಕ್ಕೆ ಯಾವ ಪಕ್ಷಾತೀತವಾದ ಸರ್ಕಾರವಾಗಲೀ, ಸಕಲ ಪಕ್ಷಗಳ ಸರ್ಕಾರವಾಗಲೀ ಏರ್ಪಡುವಂಥ ಅಗತ್ಯವಿಲ್ಲ.

ಮಾನ್ಯ ಸದಸ್ಯರು ನಮ್ಮ ಮೈಸೂರು ರಾಜ್ಯದಲ್ಲಿ ಈ ತರಹ ಏರ್ಪಾಡು ಆಗಬೇಕೆಂದು ಹೇಳಿದ್ದಾರೆ. ಅದನ್ನು ಏಕೆ ಹೇಳಿದರು ಎನ್ನುವಂಥ ಅರ್ಥ ನನಗೆ ಸರಿಯಾಗಿ ಇನ್ನೂ ಆಗಲಿಲ್ಲ. ಇಂಥ ಗಂಡಾಂತರ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿ ಸಂಯುಕ್ತ ಸರ್ಕಾರವಾಗಲೀ, ಪಕ್ಷಾತೀತವಾದ ಸರ್ಕಾರವಾಗಲೀ ಆಗಬೇಕು ಎಂದು ಹೇಳಿದ್ದರೆ ಅದಕ್ಕೆ ಸ್ವಲ್ಪಮಟ್ಟಿಗಾದರೂ ಅರ್ಥವಿತ್ತು. ಏಕೆಂದರೆ ದೇಶರಕ್ಷಣೆಗೆ, ದೇಶದ ವಿದೇಶನೀತಿ ಮತ್ತು ದೇಶದ ನಮ್ಮ ಅಂಗಗಳು ಇಂಥಾ ಅತ್ಯಂತ ಮಹತ್ವದ ವಿಷಯಗಳು ಕೇಂದ್ರ ಸರ್ಕಾರದ ಜವಾಬ್ದಾರಿಗೆ ಒಳಪಟ್ಟಂಥ ವಿಷಯಗಳಾಗಿವೆ. ಇಂದು ನಮ್ಮ ದೇಶದಲ್ಲಿ ಗಂಡಾಂತರ ಪರಿಸ್ಥಿತಿ ಇದೆ ಎಂದು ಗ್ರಹಿಸಿಕೊಂಡರೂ ರಾಜ್ಯ ಸರ್ಕಾರದಲ್ಲಿ ಪಕ್ಷಾತೀತ ಸರ್ಕಾರವಾಗಲೀ ಅಥವಾ ಸಂಯುಕ್ತ ಸರ್ಕಾರವಾಗಲೀ ಆಗಬೇಕಾದಂಥ ಅವಶ್ಯಕತೆ ಇಲ್ಲ.

ಇಂದು ಮತ್ತೊಂದು ದೃಷ್ಟಿಯಿಂದ ನೋಡಿದರೂ ಕೂಡ ಅದರ ಅಗತ್ಯವಿಲ್ಲವೆಂದು ನಾನು ಆಗಲೇ ಹೇಳಿದೆ. ಇಂದು ಆಡಳಿತ ನಡೆಸುವಂಥಾ ಕಾಂಗ್ರೆಸ್ ಪಕ್ಷ ಸಾಕಷ್ಟು ಬಹುಮತವಿದ್ದಂಥ ಪಕ್ಷ ವಿರೋಧ ಪಕ್ಷ ಒಂದು ಇದ್ದರೆ ಕಾಂಗ್ರೆಸ್ ಪಕ್ಷ ಎರಡು ಇದೆ. ಆದುದರಿಂದ ಇಲ್ಲಿ ಆಡಳಿತ ಶೈಥಿಲ್ಯವಾಗಲೀ, ಬಹುಮತವಿಲ್ಲದೆ ಯಾವುದಾದರೂ ಒಂದು constitutional crisis ಉಂಟಾಗುವಂಥ ಪರಿಸ್ಥಿತಿಯಾಗಲೀ, ಇನ್ನೂ ಬಂದಿಲ್ಲ, ಅಂಥಾದ್ದು ಬರುವ ಸಂಭವಕೂಡ ಇಲ್ಲ.

ಇನ್ನು ಈ ಸಂಯುಕ್ತ ಸರ್ಕಾರವನ್ನು ಏರ್ಪಡಿಸುವ ಭಾವನೆಯನ್ನು ನಾವು ಸ್ವಲ್ಪ ನೋಡೋಣ. ನಮ್ಮ ದೇಶದಲ್ಲಿ ಎರಡು ಮೂರು ರಾಜ್ಯಗಳಲ್ಲಿ ಒಂದೆರಡು ಬಾರಿ ಈ ಪ್ರಯೋಗವಾಗಿದೆ. ಕೇರಳದಲ್ಲಿ ಮಾನ್ಯ ಸದಸ್ಯರನೇಕರು ಹೇಳಿದ ಹಾಗೆ mid-term election ಆದ ಮೇಲೆ ಯಾವ ಪಕ್ಷಕ್ಕೂ ನಿಖರವಾದ ಬಹುಮತವಿಲ್ಲದೇ ಇದ್ದುದರಿಂದ ಅಲ್ಲಿ ಸಂಯುಕ್ತ ಸರ್ಕಾರವನ್ನೂ ರಚಿಸುವಂಥ ಅಗತ್ಯ ಉಂಟಾಯಿತು. ಅದು ಸುಮಾರು ಒಂದೂವರೆ, ಎರಡು ವರ್ಷದಷ್ಟು ಕೆಲಸ ಮಾಡಿತು. ಈ ಅವಧಿಯಲ್ಲಿ ಅವರ ಅನುಭವವೇನು ಎನ್ನುವಂಥಾದ್ದು ನಮಗೆಲ್ಲರಿಗೂ ಗೊತ್ತು. ಆಡಳಿತದಲ್ಲಿ ಮತ್ತು ಆಡಳಿತದ ಇನ್ನಿತರ ಅಂಗಗಳಲ್ಲಿ, ಅನೇಕರೀತಿಯ ಭೇದಗಳು, ಭಿನ್ನಾಭಿಪ್ರಾಯಗಳೂ ಉಂಟಾಗಿ ಅದರಿಂದ ರಾಜ್ಯದ ಅಭಿವೃದ್ಧಿ ಕೆಲಸ ಬಹಳ ತೊಂದರೆಗೆ ಈಡಾಗುತ್ತದೆ. ಪ್ರಜಾಪ್ರಭುತ್ವದ ಮೂಲಭೂತವಾದ ತತ್ವವೇನೆಂದರೆ ಯಾವಾಗ ರಾಜಕೀಯ ಸಿದ್ಧಾಂತವನ್ನು ಒಪ್ಪಿಕೊಂಡಂಥ ಪಕ್ಷ ಬಹುಮತವನ್ನು ಗಳಿಸಿಕೊಂಡು ಚುನಾವಣೆಯಲ್ಲಿ ಜಯಪ್ರದವಾಗಿ ಬರುತ್ತದೆಯೋ ಅದು ಸರ್ಕಾರವನ್ನು ನಡೆಸಬೇಕು ಎಂದು. ಅದು ಸರ್ಕಾರ ನಡೆಸುವಾಗ ತನ್ನ ರಾಜನೈತಿಕವಾದ ಸಿದ್ಧಾಂತಗಳನ್ನು, ತಾನು ಜನತೆಗೆ ಹಾಕಿಕೊಟ್ಟಂಥ ಚುನಾವಣೆಗೆ ಮೊದಲು manifests ದಲ್ಲಿ ಏನು ಕಾರ್ಯಕ್ರಮ ಹಾಕಿತ್ತೋ ಆ ಕಾರ್ಯಕ್ರಮಗಳನ್ನು ಎದುರಿಗೆ ಇಟ್ಟುಕೊಂಡು ಅದರ ಆಧಾರದ ಮೇಲೆ, ಆ ತಳಹದಿಯಮೇಲೆ ಸರ್ಕಾರದ ಕೆಲಸವನ್ನೂ ಮಾಡಬೇಕು.

ಇದು ಮೂಲಭೂತವಾದ ಸಿದ್ಧಾಂತ. ಎರಡು ರಾಜಕೀಯ ಪಕ್ಷಗಳು ಅಥವಾ ಮೂರು ರಾಜಕೀಯ ಪಕ್ಷಗಳು ಒಂದಾಗಿ ಸರ್ಕಾರವನ್ನು ಏರ್ಪಡಿಸಿದರೆ ಯಾವ ರಾಜಕೀಯ ಸಿದ್ಧಾಂತದ ಮೇಲೆ ಮತ್ತು ಕಾರ್ಯಕ್ರಮದ ಮೇಲೆ ಆ ಸರ್ಕಾರದ ಕೆಲಸಗಳು ಮತ್ತು ಇನ್ನಿತರ ಅಭಿವೃದ್ಧಿ ಕೆಲಸಗಳು ನಡೆಯಬೇಕೆನ್ನುವುದು ಸ್ಪಷ್ಟವಾಗುವುದಿಲ್ಲ. ಇದು ಮುಖ್ಯ ಕಾರಣ ಈ ಸಂಯುಕ್ತ ಸರ್ಕಾರ ಸಫಲವಾಗಿ ನಡೆಯದೇ ಇರುವುದಕ್ಕೆ ಇದ್ದರಿಂದ ಕೇರಳದಲ್ಲಿ ಎರಡು ವರ್ಷಗಳ ಅನುಭವವನ್ನು ನೋಡಿ, ಸಂಯುಕ್ತ ಸರ್ಕಾರ ಸರಿಯಾಗಿ ನಡೆಯುವುದಿಲ್ಲ, ಅದರಿಂದ ಅನೇಕ ತೊಂದರೆಗಳಿವೆ ಎಂಬ ಅನುಭವ ಬಂದಮೇಲೆ ಅದನ್ನು ತೆಗೆದು ಹಾಕಿ ಇವೊತ್ತು ಕಾಂಗ್ರೆಸ್ ಸರ್ಕಾರ ಪುನಃ ಅಸ್ತಿತ್ವಕ್ಕೆ ಬಂದಿದೆ.

Sri SANJEEVANATH AIKALA—Sir, * * *

Mr. SPEAKER.—The Hon'ble Member is not speaking from his seat. Whether he has said from another seat should be expunged.

Members may kindly rememeber that the time alloted to this is almost coming to a close. I extend the time till 12-30 P.M.

ಶ್ರೀ ಕೆ. ಪಿ. ದೇವಣ್ಣಸಿದ್ಧಪ್ಪ.—ಅವರಲ್ಲಿ ಹೋರಾಟ ಕಡಮೆಯಾಗಿದೆ ಎಂದು ಹೇಳುತ್ತಾರೆ * * *

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಕೇರಳದಲ್ಲಿ ಸಂಯುಕ್ತ ಸರ್ಕಾರ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇತ್ತು ಎಂದು ಹೇಳಿದರು. * *

Sri SANJEEVANATH AIKALA.— * * *

Mr. SPEAKER.—The Hon'ble Member is not entitled to criticise the Central Government on the floor of this House and that too in a side Debate like this. The Hon'ble Minister is trying to tell the Hon'ble Member the lessons that were learnt elsewhere.

I have expunged that portion, wherever there is criticism of the action of the President, etc.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮ್ಮ ದೇಶದಲ್ಲಿ ಈ ಸಂಯುಕ್ತ ಸರ್ಕಾರ ರಚನೆ ಮಾಡುವ ವಿಚಾರದಲ್ಲಿ ಒರಿಸ್ಸಾದಲ್ಲೂ ನಮಗೆ ಅನುಭವಕ್ಕೆ ಬಂದಿರುವಂತೆ ಕೇರಳದಲ್ಲಿ ಯಾವ ರೀತಿ ಆಯಿತೋ ಅದೇ ರೀತಿ ಆಯಿತು. ಇದರಿಂದ ಏನಾಗುತ್ತದೆ ಎಂದರೆ ಎರಡು ಬೇರೆ ಬೇರೆ ತತ್ವಗಳಿಂದ ಆಧಾರಿತವಾದ ರಾಜಕೀಯ ಪಕ್ಷಗಳು ಒಂದು ಗೂಡಿ ಸರ್ಕಾರ ನಡೆಸುವುದು ಬಹಳ ದುಸ್ತರ ಎಂದು ಸಿದ್ಧವಾಗುತ್ತದೆ.....

Sri S. GOPALA GOWDA—On a point of order, Sir, ಸಂಯುಕ್ತ ಸರ್ಕಾರ ರಚನೆಯಲ್ಲಿ ವಿಶ್ವಾಸ ಇದ್ದು ಶಕ್ತಿ ಸಾಮರ್ಥ್ಯ ಇದ್ದವರು ಹೋಗಬಾರದು. ಅದು ಇರಲಿ * * *

Mr. SPEAKER.—Nobody should criticise any person who has accepted Governorship.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರು ಈ ಗೊತ್ತುವಳಿಯನ್ನು ತಂದಂಥ ಉದ್ದೇಶ ಈ ರಾಷ್ಟ್ರದ ಗಂಡಾಂತರ ಪರಿಸ್ಥಿತಿಯಲ್ಲಿ ದೇಶದಲ್ಲಿರತಕ್ಕ ಎಲ್ಲಾ ಪಕ್ಷಗಳು ತಮ್ಮ ಶಕ್ತಿಯನ್ನು ಕ್ರೋಢೀಕರಿಸಿ ತಮ್ಮ ಶಕ್ತಿಯಲ್ಲಿ ಏನು ಗುಣ ಇದೆ ಅದರ ಪ್ರಯೋಜನ ದೇಶಕ್ಕೆ ಸಿಕ್ಕುವಂತಾಗಲಿ ಎಂಬುದು ಆಗಿದೆ. ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್ಸಿನವರು ಅಭಾಧಿತವಾಗಿ 16—17 ವರ್ಷಗಳಿಂದಲೂ ಅಧಿಕಾರದಲ್ಲಿದ್ದರೂ ಯಾವ ಪಕ್ಷದಲ್ಲೇ ಆಗಲಿ ಒಳ್ಳೆಯ ವ್ಯಕ್ತಿಗಳು ಮತ್ತು ತಜ್ಞರು ಮತ್ತು ಯಾವುದಾದರೂ ವಿಚಾರದಲ್ಲಿ ಒಳ್ಳೆಯ ಗಣ್ಯರಾದವರು ಇದ್ದಲ್ಲಿ ಅವರ ಸೇವೆಯನ್ನು ದೇಶಕ್ಕೆ ತಂದು ಕೊಡುವಂತಹ ಅವಕಾಶವನ್ನು ಅನೇಕ ಬಾರಿ ಒದಗಿಸಿಕೊಟ್ಟಿದ್ದಾರೆ ; ಅದಕ್ಕೆ ಇತ್ತೀಚಿನ ಉದಾಹರಣೆ ಎಂದರೆ ಅಶೋಕ ಮೆಹತಾ ಅವರು.

Sri SANJEEVANATH AIKALA.—When I referred to the name of 'Ashoka Mehtha' and said that our Prime Minister invited him because of his capacity, calibre and integrity, the Chairman who was then in the Chair ruled that it was not in order. I now raise the same point of order as to whether the Hon'ble Minister could refer to the name of Ashoka Mehta.

Mr. SPEAKER.—Can I revise it ? He has got as much power as I.

* * * Expunged as orderd by the chair

Sri SANJEEVANATH AIKALA.—Is the Hon'ble Member right in raising the same matter ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಒಂದು ಉದಾಹರಣೆಗಾಗಿ ನಾನೀಗ ಈ ವಿಷಯವನ್ನು ಹೇಳ ಬೇಕಾಯಿತು, ಅಷ್ಟೇ. ಈಗ ಕೇಂದ್ರ ಸರ್ಕಾರ ನಡೆಸುತ್ತಿರುವ ರಾಷ್ಟ್ರೀಯಾ ಸಂರಕ್ಷಣಾ ಸಂಸ್ಥೆಯಲ್ಲಿ ಬೇರೆ ಬೇರೆ ರಾಜಕೀಯ ಪಕ್ಷದ ಜನಗಳಿದ್ದಾರೆ. ಈಗಾಗಲೇ ದೇಶದಲ್ಲಿರತಕ್ಕ ಎಲ್ಲ ಜನರ ಶಕ್ತಿ ಹಾಗೂ ಸೇವೆಗಳನ್ನು ಕೇಂದ್ರ ಸರ್ಕಾರ ಪಡೆಯುತ್ತಿದೆ. ಆದುದರಿಂದ ಈಗ ಈ ನಿರ್ಣಯದಲ್ಲಿ ಏನು ಉದ್ದೇಶವನ್ನು ಅಡಕಮಾಡಿದೆಯೋ ಅದು ಈಗಾಗಲೇ ಕಾರ್ಯಗತವಾಗಿದೆ. ಆದುದರಿಂದ ಈಗ ತಂದಿರತಕ್ಕ ಈ ನಿರ್ಣಯ ಅಪ್ರಕೃತ, ಹಾಗೂ ಅವ್ಯವಹಾರಿಕ. ಆದುದರಿಂದ ಇದನ್ನು ಸರ್ವರೂ ತಿರಸ್ಕಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Before I put the reolution to the vote of the House I want to give a specific direction that any reference, remark, speech or interrogation which relating to the President, the Central Government or the Prime Minister or the Governor all that will be expungero.

What does the Hon'ble Member purpose to do with his resolution ?

Sri VEERABHADRAPPA ERAPPA (Yelburga).—I press it.

Mr. SPEAKER.—The question is :

"That this Assembly is of opinion that keeping in view the present National Emergency, the present single party Government of the State be replaced by popular non-party Government."

The resolution was negatived.

Mr. SPEAKER.—Now the House stands adjourned *sine die.*

The House adjourned sine die *at Twenty-five Minutes past Twelve of the Clock.*

WD 1317—GPB—900—28-12-63.